Swabhimani Sahakari

Pages : 30 /12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 05
May - 2022

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


ಬೆಳಗಾವಿ ಪ್ರಾಂತೀಯ ಕಟ್ಟಡ


ಬೆಳಗಾವಿ ಪ್ರಾಂತೀಯ ಕಟ್ಟಡ ಉದ್ಘಾಟನೆ


ಕಲಬುರಗಿ ಪ್ರಾಂತೀಯ ಕಟ್ಟಡದ ಉದ್ಘಾಟನೆ


ಕಲಬುರಗಿ ಪ್ರಾಂತೀಯ ಕಟ್ಟಡ


ಮೇ 3, ಬಸವ ಜಯಂತಿ


ಮೇ 3, ರಂಜಾನ್


ಮೇ 5, ರಾಮಾನುಜಾಚಾರ್ಯ ಜಯಂತಿ


ಮೇ 6, ಶಂಕರಾಚಾರ್ಯ ಜಯಂತಿ


ಮೇ 16, ಬುದ್ಧ ಪೂರ್ಣಿಮೆ


ಮೇ 1,
ಕಾರ್ಮಿಕರ ದಿನಾಚರಣೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5549

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1503



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಏಪ್ರಿಲ್ 2022 ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ವಿಶೇಷವಾಗಿ ಸಂಯುಕ್ತ ಸಹಕಾರಿಗೆ ಐತಿಹಾಸಿಕ ಮಾಹೆಯಾಗಿ ಅಚ್ಚರಿಯಾಗಿ ಉಳಿಯುವಂತೆ ಕಾರ್ಯಕ್ರಮಗಳು ನಡೆದಿವೆ. ದಿನಾಂಕ 20.04.2022 ರಂದು ಮಾನ್ಯ ಸಹಕಾರ ಸಚಿವ ಶ್ರೀ ಸೋಮಶೇಖರರವರಿಂದ ಸಂಯುಕ್ತ ಸಹಕಾರಿಯ ಬೆಳಗಾವಿ ನೂತನ ಕಟ್ಟಡದ ಉದ್ಘಾಟನೆ, ಹಾಗೂ ಕಲಬುರಗಿ ನೂತನ ಕಟ್ಟಡದ ವರ್ಚುಯಲ್ ಉದ್ಘಾಟನೆಗಳು ಅತ್ಯಂತ ವೈಭವದಿಂದ ಜರುಗಿವೆ.

# ಸಾಧನೆಗಳ ಪರ್ವಕಾಲದಲ್ಲಿ ಸಂಯುಕ್ತ ಸಹಕಾರಿಯ ಪ್ರಗತಿಗೆ ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರ ರವರ, ಸಹಕಾರಿ ನಿಬಂಧಕರ, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪ್ರೋತ್ಸಾಹ ಹಾಗೂ ಮಾರ್ಗದರ್ಶನಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಕೃತಜ್ಞತೆಗಳು.

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಕಾರ್ಮಿಕ ದಿನಾಚರಣೆಯ, ಅಕ್ಷಯ ತೃತೀಯದ, ಬಸವ ಜಯಂತಿಯ, ರಾಮಾನುಜಾಚಾರ್ಯರ, ಶಂಕರಾಚಾರ್ಯರ ಹಾಗೂ ಬುದ್ಧಪೂರ್ಣಿಮಾ ಹಬ್ಬಗಳ ಹಾರ್ದಿಕ ಶುಭಾಶಯಗಳು. ನಮ್ಮ ದೇಶದಲ್ಲಿ ಹಬ್ಬ ಹರಿದಿನಗಳು ದೇವರನ್ನು, ಗುರುಗಳನ್ನು, ಹಿರಿಯರನ್ನು, ನಮ್ಮ ಸಂಪ್ರದಾಯಗಳನ್ನು, ನಮ್ಮ ಸಂಸ್ಕೃತಿಯನ್ನು ಜ್ಞಾಪಿಸಿಕೊಳ್ಳುವ ಹಾಗೂ ಸಂಭ್ರಮಿಸುವ ಮತ್ತು ಮುಂಬರುವ ಜನಾಂಗಕ್ಕೆ ಈ ಎಲ್ಲಾ ದಿನಾಚರಣೆಯ ಮಹತ್ವದ ಸಂದೇಶವನ್ನು ತಲುಪಿಸುವ ದಿನಗಳು. ಎಲ್ಲ ದಿನಗಳು ನಮಗೆ ಹೆಚ್ಚಿನ ಉತ್ಸಾಹವನ್ನು ನೀಡುವುದರ ಜೊತೆಗೆ ನಮ್ಮನ್ನೆಲ್ಲ ಸುಸಂಸ್ಕೃತರನ್ನಾಗಿಸುತ್ತವೆ. ಈ ಎಲ್ಲ ದಿನಗಳು ತಮಗೆಲ್ಲ ಸುಖ ಶಾಂತಿ ಹಾಗೂ ನೆಮ್ಮದಿಯನ್ನು ನೀಡಲಿ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಪ್ರಾರ್ಥಿಸುತ್ತದೆ.

ಏಪ್ರಿಲ್ 2022 ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ವಿಶೇಷವಾಗಿ ಸಂಯುಕ್ತ ಸಹಕಾರಿಗೆ ಐತಿಹಾಸಿಕ ಮಾಹೆಯಾಗಿ ಅಚ್ಚರಿಯಾಗಿ ಉಳಿಯುವಂತೆ ಕಾರ್ಯಕ್ರಮಗಳು ನಡೆದಿವೆ. ದಿನಾಂಕ 20.04.2022 ರಂದು ಮಾನ್ಯ ಸಹಕಾರ ಸಚಿವ ಶ್ರೀ ಸೋಮಶೇಖರರವರಿಂದ ಸಂಯುಕ್ತ ಸಹಕಾರಿಯ ಬೆಳಗಾವಿ ನೂತನ ಕಟ್ಟಡದ ಉದ್ಘಾಟನೆ ಹಾಗೂ ಕಲಬುರಗಿ ನೂತನ ಕಟ್ಟಡದ ವರ್ಚುಯಲ್ ಉದ್ಘಾಟನೆಗಳು ಅತ್ಯಂತ ವೈಭವದಿಂದ ಜರುಗಿವೆ. ಬೆಳಗಾವಿ ಕಟ್ಟಡದ ಪೂಜೆ ದಿನಾಂಕ 06.04.2022 ರಂದು ಕಲಬುರಗಿ ಕಟ್ಟಡದ ಪೂಜೆ ದಿನಾಂಕ 24.04.2022 ರಂದು ಈ ಎರಡು ಕಟ್ಟಡಗಳ ಪೂಜೆಗಳು ಅತ್ಯಂತ ವಿಜ್ರಂಭಣೆಯಿಂದ ನಡೆದಿರುವುದು ಈ ಎಲ್ಲ ಕಾರ್ಯಕ್ರಮಗಳಲ್ಲಿ ರಾಜ್ಯದ ಹೆಚ್ಚಿನ ಸೌಹಾರ್ದ ಸಹಕಾರಿಗಳು ಸಹಕಾರಿ ಗಣ್ಯರು ಭಾಗವಹಿಸಿ ಶುಭಕೋರಿರುವುದು ಸಂಯುಕ್ತ ಸಹಕಾರಿಯ ಗರಿಮೆಯನ್ನು ಹೆಚ್ಚಿಸಿದೆ ಹಾಗೂ ಆಡಳಿತ ಮಂಡಳಿಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ.

ಮಾನ್ಯ ಸಹಕಾರ ಸಚಿವರು, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಈ ಎಲ್ಲ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸಿರುವುದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸಂಯುಕ್ತ ಸಹಕಾರಿಗೆ ಕೇಂದ್ರದಲ್ಲಿ ನೂತನ ಕಟ್ಟಡ, ಬೆಳಗಾವಿಯಲ್ಲಿ ಕಟ್ಟಡ, ಕಲಬುರಗಿಯಲ್ಲಿ ಕಟ್ಟಡ ಮೈಸೂರಿನಲ್ಲಿ ನಿವೇಶನಗಳು ಈ ಆಡಳಿತ ಮಂಡಳಿಯ ಅವಧಿಯಲ್ಲಿ ಜರುಗಿದ್ದು ಇದೊಂದು ಸಾಧನೆಗಳ ಪರ್ವಕಾಲ ಎಂದು ಪರಿಗಣಿಸಬಹುದು. ರಾಜ್ಯದ "ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆಗೆ" ಎಂಬ ಸಂಯುಕ್ತ ಸಹಕಾರಿಯ ಧ್ಯೇಯವಾಕ್ಯವನ್ನು ಪಾಲಿಸಲು ಕಾರ್ಯಗತಮಾಡಲು ಸಂಯುಕ್ತ ಸಹಕಾರಿಗೆ ಜವಾಬ್ದಾರಿಗಳು ಹೆಚ್ಚಿವೆ. ಈ ಜವಾಬ್ದಾರಿಗಳ ಯಶಸ್ವಿ ನಿರ್ವಹಣೆಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಸಂಪೂರ್ಣ ಸಹಕಾರವನ್ನು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒ ಳ ಪು ಟ ಗ ಳ ಲ್ಲಿ. . .**

ಅಧ್ಯಕ್ಷರ ನುಡಿ........................................... 2
ಸಂಪಾದಕೀಯ......................................... 3
ಜ್ಞಾನ ಜ್ಯೋತಿ........................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................................ 05–20
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................................ 21–23
ನಿಮ್ಮ ಪ್ರಶ್ನೆ – ನಮ್ಮ ಉತ್ತರ ........... 24–25
**ಲೇಖನಗಳು :**
Banking sector in India .................... ........................................................ 26–28
ಕಾರ್ಮಿಕರ ದಿನಾಚರಣೆಯನ್ನು ಶ್ರಮಿಕರ ದಿನಾಚರಣೆಯಾಗಿ ಅರ್ಥಪೂರ್ಣವಾಗಿ ಆಚರಿಸೋಣ ......................................... 29

# ಸಂಪಾದಕೀಯ

## ಸಂಯುಕ್ತ ಸಹಕಾರಿಯ ಚುನಾವಣೆ : ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳ ಪ್ರಥಮ ಹಾಗೂ ಆದ್ಯತೆಯ ಜವಾಬ್ದಾರಿ.

ಪ್ರಸಕ್ತ ಆಡಳಿತ ಮಂಡಳಿಯ ಅಧಿಕಾರದ ಅವಧಿಯು ಇದೇ ದಿನಾಂಕ 27.07.2022 ರಂದು ಮುಕ್ತಾಯವಾಗುತ್ತದೆ. ಬಹುಶಃ ಜುಲೈ 2ನೇ ವಾರದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಪ್ರಸ್ತುತ ಆಡಳಿತ ಮಂಡಳಿ ಅವಧಿ ಮುಗಿಯಿತು ಕ್ರಮವಾಗಿ ಸಂಯುಕ್ತ ಸಹಕಾರಿ ಆಡಳಿತ ಮಂಡಳಿಯ ಚುನಾವಣೆಯನ್ನು ಜರುಗಿಸಲಾಗುತ್ತದೆ. ಸದ್ಯಕ್ಕೆ ಅಂದಾಜು 4500 ಸೌಹಾರ್ದ ಸಹಕಾರಿಗಳು ಮತದಾರರಿದ್ದಾರೆ. ರಾಜ್ಯದ ಚುನಾವಣಾ ಪ್ರಾಧಿಕಾರವು ಬೆಂಗಳೂರಿನ ರಿಜನಲ್ ಕಮೀಷನರ್ ರವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಚುನಾವಣಾ ಪ್ರಕ್ರೀಯೆ ಪ್ರಾರಂಭವಾಗಿದೆ. ಈ ಬಗ್ಗೆ ಸಂಯುಕ್ತ ಸಹಕಾರಿಯ ಕ್ಷೇತ್ರ ಸಿಬ್ಬಂದಿಯವರು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳು ಹೆಚ್ಚಿನ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುವತ್ತ ಗಮನಹರಿಸುವುದು ಅಗತ್ಯ.

ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಸಹಕಾರ ಚುನಾವಣಾ ಪ್ರಾಧಿಕಾರದಿಂದ ಡೆಲಿಗೇಟ್ ಫಾರ್ಮನ್ನು ಮುದ್ರಿಸಿ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಿದೆ. ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಚುನಾವಣೆಯಲ್ಲಿ ಭಾಗವಹಿಸುವ ಡೆಲಿಗೇಟ್ ತಮ್ಮ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯಿಸಿ ಸದರಿ ನಿರ್ಣಯವನ್ನು ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಿಂದ ಧೃಡೀಕರಿಸಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಕಳುಹಿಸುವ ಮಹತ್ವದ ಜವಾಬ್ದಾರಿಯತ್ತ ಗಮನಹರಿಸಿ ಕಾರ್ಯನಿರ್ವಹಿಸುವುದು ಅಗತ್ಯ.

ಈ ಚುನಾವಣಾ ಕಾರ್ಯ ಅತ್ಯಂತ ಸೂಕ್ಷ್ಮಕಾರ್ಯವಾಗಿರುವುದರಿಂದ ಮತದಾರರಪಟ್ಟಿ ಸಿದ್ಧತೆ ಕಾರ್ಯ ತ್ವರಿತವಾಗಿ ನಡೆಯಬೇಕಿದೆ. ಪ್ರತಿಯೊಂದು ಸಹಕಾರಿಯ ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ವಾರ್ಷಿಕ ವಂತಿಗೆ ಮತ್ತು ಸಹಕಾರ ಶಿಕ್ಷಣ ನಿಧಿಗಳನ್ನು ನಿಗದಿತ ದಿನಾಂಕಗಳ ಒಳಗಾಗಿ ಪಾವತಿಸಿರುವುದನ್ನು ಖಚಿತಪಡಿಸಿಕೊಳ್ಳುವುದು ವಾರ್ಷಿಕ ವಂತಿಗೆ ಪಾವತಿಯ ಜೊತೆಗೆ ಜಿ.ಎಸ್.ಟಿ ಪಾವತಿಸಿರುವ ಬಗ್ಗೆ ಅಥವಾ ಬಾಕಿಯಿರುವುದನ್ನು ಪರಿಶೀಲಿಸಿ ತಕ್ಷಣವೇ ಸೂಕ್ತ ಕ್ರಮವಿಡುವುದರ ಮಹತ್ವದ ಜವಾಬ್ದಾರಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಂಯುಕ್ತ ಸಹಕಾರಿಯ ಕ್ಷೇತ್ರ ಸಿಬ್ಬಂದಿಯವರು ಗಮನಿಸಿ ಸೂಕ್ತ ಕ್ರಮ ಜರುಗಿಸುವುದು ಅಗತ್ಯ.

ವಿಶೇಷವಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯೂ ಸೇರಿದಂತೆ ಪ್ರಾಂತೀಯ ಕಛೇರಿ ಹಾಗೂ ಎಲ್ಲ ಜಿಲ್ಲೆಗಳ ಜಿಲ್ಲಾ ಸಂಯೋಜಕರು ರಾಜ್ಯದ ಸೌಹಾರ್ದ ಸಹಕಾರಿಗಳು ಸುಸ್ತಿದಾರರ ಪಟ್ಟಿಯಲ್ಲಿ (ಡಿಫಾಲ್ಟರುಗಳ) ಪಟ್ಟಿಯಿಂದ ಹೊರಬರುವಂತೆ ಅರ್ಹಮತದಾರರ ಪಟ್ಟಿಯಲ್ಲಿರುವಂತೆ ಅಗತ್ಯವೆನಿಸುವ ಎಲ್ಲ ಕ್ರಮಗಳನ್ನು ಜರುಗಿಸುವುದು ಅಗತ್ಯ. ವಿಶೇಷವಾಗಿ ಜಿಲ್ಲಾ ಸಂಯೋಜಕರು ಸೌಹಾರ್ದ ಸಹಕಾರಿಗಳಿಂದ ಡೆಲಿಗೇಟ್ ಕಳುಹಿಸುವುದಕ್ಕಾಗಿ ಆಡಳಿತ ಮಂಡಳಿ ಸಭೆ ನಡೆಸುವ ವ್ಯವಸ್ಥೆ, ಡೆಲಿಗೇಷನ್ ವೆರಿಫಿಕೇಶನ್ ವ್ಯವಸ್ಥೆ ಹಾಗೂ ಡಿಫಾಲ್ಟರ್ ಕ್ಲೀಯರನ್ಸ್ ವ್ಯವಸ್ಥೆಯತ್ತ ಗಮನಹರಿಸುವುದು ಅಗತ್ಯ.

## 'ಪ್ರಯತ್ನಂ ಸರ್ವ ಸಿದ್ಧಿ ಸಾಧನಂ'

ಜೀವನದ ಉದ್ದಕ್ಕೂ ಕಷ್ಟ ನಷ್ಟ, ಸುಖ ದುಃಖ, ಏಳುಬೀಳುಗಳು ಸಹಜ. ಇವುಗಳನ್ನು ತಡೆಯಲು ಸಾಧ್ಯವಿಲ್ಲ. "ಬಾರದು ಬಪ್ಪದು ಬಪ್ಪುದು ತಪ್ಪುದು"

ಜೀವನದಲ್ಲಿ ಕಷ್ಟಗಳು ಬರುವುದನ್ನ ನಮ್ಮೊಳಗಿನ ಸಾಮರ್ಥ್ಯವನ್ನು ಸಾಬೀತುಪಡಿಸಲು. ನೀವು ಮಣಿಯದ ವ್ಯಕ್ತಿತ್ವ ಎಂಬುದನ್ನು ಮನವರಿಕೆ ಮಾಡಿಸಲು' ಎಂಬ ಸಾಲುಗಳು ಕೇಳಿದಾಕ್ಷಣ ನಮ್ಮ ಸ್ಮೃತಿ ಪುಟ ತಕ್ಷಣ–ಕ್ಕೆ ಸ್ಮರಿಸುವುದು ನಮ್ಮ ದೇಶದ ಶ್ರೇಷ್ಠ ವಿಜ್ಞಾನಿ ಡಾ ಎಪಿಜೆ ಅಬ್ದುಲ್ ಕಲಾಂ ಅವರನ್ನು. ಬಾಳಿನುದ್ದಕ್ಕೂ ಎದುರಾದ ಕಷ್ಟ ನೋವು, ಚುಚ್ಚು ಮಾತುಗಳಿಗೆ ಎದೆಗುಂದದೆ ಧೈರ್ಯದಿಂದ ಅವುಗಳನ್ನು ಸವಾಲುಗಳನ್ನಾಗಿ ಸ್ವೀಕರಿಸಿ ಅವರು ತಮ್ಮ ಆಸೆ, ಗುರಿಯ ನಿಲುವನ್ನು ಆಕಾಶದ ಎತ್ತರಕ್ಕೆ ಸ್ಥಾಪಿಸಿದರು.

ಧೈರ್ಯ ಎಂಬುದು ಎರಡೇ ಅಕ್ಷರವಾದರೂ ಅದರ ವ್ಯಾಪ್ತಿ ಹೆಚ್ಚಿನದು. ಬದುಕಿನ ಕಷ್ಟಗಳಲ್ಲಿ ಸಿಲುಕಿ ಜೀವನವೇ ಮುಗಿಯಿತು ಎನ್ನುವಾಗ ಧೈರ್ಯ ನಿಮ್ಮ ಜೀವನದ ಪಾಠಗಳು, ಸಾರ್ಥಕತೆ ಮತ್ತು ಸಾಧನೆಯ ಹಾದಿ ತೋರಿಸುತ್ತದೆ. ಹಾಗೆ ನೋಡುವುದಾದರೆ ಬಡ ಕುಟುಂಬದಲ್ಲಿ ಜನಿಸಿದ ಅಬ್ದುಲ್ ಕಲಾಂ ತಮಗೆ ಬಂದ ಕಷ್ಟಗಳನ್ನು ಸವಾಲುಗಳನ್ನಾಗಿ ತೆಗೆದುಕೊಳ್ಳದಿದ್ದರೆ, ಧೈರ್ಯದಿಂದ ಎದುರಿಸದೆ ಇದ್ದಿದ್ದರೆ ಬಹುಶಃ ಭಾರತದಲ್ಲಿ ನಮಗೆ ಉತ್ತಮ ರಾಷ್ಟ್ರ ನಾಯಕ, ಶ್ರೇಷ್ಠ ವಿಜ್ಞಾನಿ ಸಿಗುತ್ತಿರಲಿಲ್ಲವೇನೋ.

ಮರವೊಂದು ಬಿಸಿಲಿನ ಬೇಗೆಗೆ ತನ್ನ ಎಲೆಯುದುರಿಸುತ್ತಿದೆ ಎಂದರೆ ಅದು ನಾಶವಾಗುತ್ತಿದೆ ಎಂದರ್ಥವಲ್ಲ ಅದು ತನ್ನ ವಸಂತ ಮಾಸದ ಹೊಸ ಚಿಗುರಿಗೆ ಕಾಯುತ್ತಿದೆ ಎಂದರ್ಥ. ಆ ಮರಕ್ಕೆ ಬಿಸಿ ತಾಪಗಳನ್ನು ತಾಗಿದ ಹಾಗೆ ನಮ್ಮ ಬದುಕಿನಲ್ಲಿ ಕಷ್ಟಗಳ ತಾಪ ಸದಾ ಬರುತ್ತಲೇ ಇರುತ್ತವೆ. ನಾವು ಆ ಮರದಂತೆ ತಾಳ್ಮೆಯಿಂದ ನಮ್ಮ ಸಮಯಕ್ಕಾಗಿ ಧೈರ್ಯದಿಂದ ಕಾಯಬೇಕು. ಇಂದಿನ ಸ್ಪರ್ಧಾತ್ಮಕ ಬದುಕಿನಲ್ಲಿ ಹಾಕುವ ಚಪ್ಪಲಿಯಿಂದ ಹಿಡಿದು, ತಿನ್ನುವ ಆಹಾರದವರೆಗೆ ಸ್ಪರ್ಧೆ ಆರಂಭವಾಗಿದೆ. ಹೀಗಾಗಿ ಮಾನವ ವಾಸ್ತವದಲ್ಲಿ ಎಷ್ಟು ಧೈರ್ಯವನ್ನು ಹೊಂದಿರುತ್ತಾನೆ ಅಷ್ಟೇ ಪ್ರಯತ್ನಶೀಲನು ಆಗಬೇಕಾಗುವುದು.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

'ಪ್ರಯತ್ನಂ ಸರ್ವ ಸಿದ್ಧಿ ಸಾಧನಂ' ಎಂಬ ಮಾತನ್ನು ತನ್ನೊಳಗೆ ಅಳವಡಿಸಿಕೊಂಡು, ಅನುಸರಿಸುವುದು ಜೀವನದಲ್ಲಿ ಅನಿವಾರ್ಯವಾಗಿದೆ. ಯಾವಾಗ ಧೈರ್ಯ ನಿಮ್ಮನ್ನು ಆವರಿಸಿಕೊಳ್ಳುತ್ತದೆಯೊ ಆಗ ನಮ್ಮ ಬದುಕಿನ ತಿರುವು, ಹವ್ಯಾಸಗಳು ಶ್ರೇಷ್ಠತೆಯ ಹಾದಿಯತ್ತ ಸಾಗುತ್ತವೆ. ನಮ್ಮಲ್ಲಿ ಪ್ರಯತ್ನದ ನಿಲುವು ಹೇಗಿರಬೇಕು ಎಂದರೆ ಥಾಮಸ್ ಆಲ್ವ ಎಡಿಸನ್ ಅಮೇರಿಕ ಸಂಶೋಧಕ. ಇವನು ಬಲ್ಬ್ ತಯಾರಿಸುವ ಪ್ರಯತ್ನದಲ್ಲಿರುವಾಗ ಅವನ ಶಿಷ್ಯ ಹೇಳಿದ ಸರ್ ನಾವು ಇಲ್ಲಿಯವರೆಗೂ ಪ್ರಯತ್ನ ಮಾಡಿದೆವು ಆದರೆ ನಾವು ಏನು ಕಲಿಯಲಿಲ್ಲ ಮತ್ತು ಯಾವುದೇ ಪ್ರಯೋಜನ ದೊರೆಯಲಿಲ್ಲ ಇದನ್ನು ಇಲ್ಲಿಗೆ ನಿಲ್ಲಿಸಿ ಬಿಡಿ ಎಂದ, ಆಗ ಎಡಿಸನ್ ಹೇಳಿದ ನಾವು ಇಂದು ನಮ್ಮ ಈವರೆಗಿನ ಪ್ರಯತ್ನಗಳಲ್ಲಿ ಈ ತಂತಿಗಳಿಂದ ಬಲ್ಬ್ ತಯಾರಿಸಲು ಆಗುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಕಲಿತಿದ್ದೇವೆ ಎಂದು ಋಣಾತ್ಮಕವಾಗಿ ಚಿಂತಿಸಿ ಉತ್ತರಿಸಿದರು.

ನಾವು ಸಹ ಧೈರ್ಯದಲ್ಲಿದ್ದರೂ ಕೆಲವು ಸಮಯ ಸೋಲುಗಳು ನಮ್ಮನ್ನು ಬೆನ್ನಟ್ಟುತ್ತವೆ. ಆಗ ನಾವು ಸೋತೆವೆಂದು ಹಿಂಜರಿಯುವ ಬದಲು ಆ ಪ್ರತಿ ಸೋಲುಗಳಲ್ಲಿ ನಾನು ಏನನ್ನೋ ಹೊಸತಾಗಿ ಕಲಿತೆ ಎಂಬ ಋಣಾತ್ಮಕ ನಂಬಿಕೆಹೊತ್ತ ಯೋಚನೆಗಳು ನಮ್ಮಲ್ಲಿ ಒಗ್ಗೂಡಿಸಿಕೊಳ್ಳಬೇಕು. ಭಗವದ್ಗೀತೆಯ ಸಾರವು ಹೀಗೆ ಇದೆ ಯಾವಾಗ ನಿಮ್ಮಲ್ಲಿ ನೀವು ಧೈರ್ಯವನ್ನು ಪ್ರತಿಷ್ಠಾಪನೆ ಮಾಡಿಕೊಳ್ಳುವಿರಿ ಆಗ ನಿಮ್ಮಲ್ಲಿ ತಾಳ್ಮೆ ,ನ್ಯಾಯ, ತ್ಯಾಗ, ಸತ್ಯ, ದಂತಹ ಗುಣಗಳು ಸೃಷ್ಟಿಯಾಗುತ್ತದೆ ಅವುಗಳೇ ಪ್ರಕೃತಿಯ ಸಹಜ ಗುಣ ಮತ್ತು ನಿಮ್ಮ ಶ್ರೇಷ್ಠತೆಯನ್ನು ಸಾರಿ ಹೇಳುವ ಧರ್ಮವಾಗಿದೆ.

"ಧೈರ್ಯದಿಂದ ಪ್ರಯತ್ನದಲ್ಲಿ ಮುನ್ನಡೆದರೆ ಯಶಸ್ಸು"

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 21377 ಆಗಿರುತ್ತದೆ. ಇವುಗಳ ಪೈಕಿ 11741 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9636.

**ಏಪ್ರಿಲ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 79 ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 197

**ಅಮಲ್ಜಾರಿ ಪ್ರಕರಣಗಳು :** ಒಟ್ಟು 4461 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 701 ಪ್ರಕರಣಗಳು ಇತ್ಯರ್ಥಗೊಂಡಿದ್ದು. 3760 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಏಪ್ರಿಲ್ ತಿಂಗಳಿನಲ್ಲಿ 225 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

# ಸಂಯುಕ್ತ ಸಹಕಾರಿಯ ಬೆಳಗಾವಿ ಹಾಗೂ ಕಲಬುರಗಿ ಕಟ್ಟಡಗಳ ಉದ್ಘಾಟನೆ.

## ಕರ್ನಾಟಕದ ಸೌಹಾರ್ದ ಸಹಕಾರಿ ವ್ಯವಸ್ಥೆ ದೇಶಕ್ಕೆ ಮಾದರಿ. ಠೇವಣಿದಾರರಿಗೆ ಸದಸ್ಯರಿಗೆ ಮೋಸಮಾಡುವ ಸಹಕಾರಿ ಸಂಸ್ಥೆಗಳ ವಿರುದ್ಧ ಅಗತ್ಯ ಕ್ರಮ - ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ



**ಬೆಳಗಾವಿ :** ಸಹಕಾರ ಸಚಿವ ಮಾನ್ಯ ಶ್ರೀ ಎಸ್.ಟಿ.ಸೋಮಶೇಖರವರು ಬೆಳಗಾವಿಯಲ್ಲಿ ದಿನಾಂಕ 20.04.2022 ರಂದು ಬೆಳಗಾವಿ ನೂತನ ಕಟ್ಟಡದ ಹಾಗೂ ಕಲಬುರಗಿ ನೂತನ ಕಟ್ಟಡದ ವರ್ಚುಯಲ್ ಉದ್ಘಾಟನೆಯನ್ನು ನೆರವೇರಿಸಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯವಸ್ಥೆ ಕಾರ್ಯವೈಖರಿ ದೇಶಕ್ಕೆ ಮಾದರಿಯಾಗಿದೆ. ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕ್ಷೇತ್ರದಲ್ಲಿ ಸರಕಾರದ ಹಸ್ತಕ್ಷೇಪ ಕಡಿಮೆ ಇದೆ. ವ್ಯವಹಾರಿಕ ಸ್ವಾತಂತ್ರ್ಯ ಇರುವುದರಿಂದ ಆಡಳಿತ ಮಂಡಳಿಗೆ ಸ್ವಾಯತ್ತತೆ ಇದೆ. ಆದರೆ ಕೆಲವು ಸೌಹಾರ್ದ ಸಹಕಾರಿಗಳು ಈ ಸ್ವಾಯತ್ತತೆಯನ್ನು ಸ್ವೇಚ್ಛಾಚಾರಕ್ಕಾಗಿ ಉಪಯೋಗಿಸಿಕೊಂಡು ಠೇವಣಿದಾರರಿಗೆ ಸದಸ್ಯರಿಗೆ ಮೋಸ ಮಾಡುತ್ತಿರುವುದು ಕಂಡು ಬಂದಿದೆ. ಈ ಬಗ್ಗೆ ಕಾನೂನಿನಲ್ಲಿ ಕಠಿಣ ಕ್ರಮಗಳನ್ನು ಸೇರಿಸಿ ಕಾನೂನಿಗೆ ತಿದ್ದುಪಡಿ ಮಾಡಲಾಗುವುದು ಮೋಸ ಮಾಡುವ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿಯವರನ್ನು ಹಾಗೂ ಅಧಿಕಾರಿಗಳನ್ನು ಸರಕಾರ ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು.

### ಬೆಳಗಾವಿ ಪ್ರಾಂತ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ವೈವಿಧ್ಯತೆ ಇದೆ. : ಶ್ರೀ ಜಗದೀಶ ಕವಟಗಿಮಠ



ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಜಗದೀಶ ಕವಟಗಿಮಠರವರು ಅತಿಥಿಗಣ್ಯರನ್ನು ಸ್ವಾಗತಿಸುತ್ತ ರಾಜ್ಯದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಬೆಳಗಾವಿ ವಿಭಾಗದಲ್ಲಿ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಅನೇಕ ವಿಧವಾದ ವೈವಿಧ್ಯಮಯವಾದ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ವಿಶೇಷ. ಅದರಂತೆ ಸೌಹಾರ್ದ ಸಹಕಾರಿ ಕ್ಷೇತ್ರವೂ ಉತ್ತಮವಾಗಿ ಬೆಳೆಯುತ್ತಿದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ತಮ್ಮ ಅಧಿಕಾರದ ಅವಧಿಯಲ್ಲಿ ವಿಶೇಷವಾಗಿ ಬೆಳಗಾವಿ ಪ್ರಾಂತದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚಿರುವುದರಿಂದ ಬೆಳಗಾವಿ ಪ್ರಾಂತ್ಯಕ್ಕೆ ಸ್ವಂತ ಕಟ್ಟಡದ ಅವಶ್ಯಕತೆ ಇರುವುದನ್ನು ಗಮನಿಸಿ ಸ್ವಂತ ಕಟ್ಟಡ ನಿರ್ಮಿಸಲಾಗಿದೆ. ಈ ಕಟ್ಟಡವನ್ನು ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ಉದ್ಘಾಟಿಸಿರುವುದು ಸಹಕಾರಿಗಳಿಗೆ ಹೆಚ್ಚಿನ ಸಂತಸವನ್ನು ತಂದಿದೆ ಎಂದು ತಿಳಿಸಿದರು.

### ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಸಾಧನಾ ಪರ್ವಕಾಲ : ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ



ಪ್ರಾಸ್ತಾವಿಕ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಕಳೆದ 5 ವರ್ಷದಲ್ಲಿ ಸಂಯುಕ್ತ ಸಹಕಾರಿ ವೇಗದ ಪ್ರಗತಿಯನ್ನು ಸಾಧಿಸುತ್ತ ಬಂದಿದೆ. ವಿಶೇಷವಾಗಿ ಬೆಂಗಳೂರಿನಲ್ಲಿ ಕೇಂದ್ರ ಕಛೇರಿಗೆ ಸ್ವಂತ ಕಟ್ಟಡ ನಿರ್ಮಾಣ. ಪ್ರಸಕ್ತ ಬೆಳಗಾವಿ ಹಾಗೂ ಕಲಬುರಗಿ ಪ್ರಾಂತೀಯ ಕಛೇರಿಗಳಿಗೆ ಸ್ವಂತ ಕಟ್ಟಡಗಳ ನಿರ್ಮಾಣ. ಮೈಸೂರಿನಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಖರೀದಿಸಿರುವುದು ರಾಜ್ಯದಾದ್ಯಂತ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ರಚನೆ ಈಗಾಗಲೇ 15 ಜಿಲ್ಲೆಗಳಲ್ಲಿ ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿರುವುದು ಉಳಿದ ಜಿಲ್ಲೆಗಳಲ್ಲಿ ಒಕ್ಕೂಟಗಳ ರಚನೆಗೆ ಮಾಡಲು ಕ್ರಮವಿಡುತ್ತಿರುವುದು "ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ" ಎಂಬ ಧ್ಯೇಯ ವಾಕ್ಯದೊಂದಿಗೆ ಕೆಲವು ಸೌಹಾರ್ದ ಸಹಕಾರಿಗಳಲ್ಲಿ ಠೇವಣಿದಾರರಿಗೆ ಸದಸ್ಯರಿಗೆ ಮೋಸಗಳನ್ನು ತಡೆಯುವುದಕ್ಕಾಗಿ ಟಾಸ್ಕಫೋರ್ಸ ರಚನೆ, ರಾಜ್ಯಾದಾದ್ಯಂತ ಸಮಾಲೋಚನೆ ಸಭೆಗಳು, ಸಂಪರ್ಕ ಸಭೆಗಳು, ಪತ್ರಿಕಾಗೋಷ್ಠಿಗಳು, ಅಗತ್ಯಕ್ಕನುಗುಣವಾಗಿ ವಿಷಯಾಧಾರಿತ ತರಬೇತಿಗಳು ಮತ್ತು ಡಿ.ಸಿ.ಬಿ.ಎಮ್ ಕೋರ್ಸ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಈ ಆಡಳಿತ ಮಂಡಳಿಯ ಅವಧಿಯಲ್ಲಿ ಸಾಧನೆಗಳು ಹಲವಾರು. ಹೀಗಾಗಿ

ಇದನ್ನು ಸಾಧನಾ ಪರ್ವವೆಂದು ಕರೆಯಬಹುದಾಗಿದೆ. ಬೆಳಗಾವಿ ಹಾಗೂ ಕಲಬುರಗಿ ನೂತನ ಕಟ್ಟಡಗಳ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ಉದ್ಘಾಟಿಸಿರುವುದಕ್ಕೆ ಆಡಳಿತ ಮಂಡಳಿಯ ಪರವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.

**ಹಿರಿಯ ಸಹಕಾರಿಗೆ ಸಹಕಾರ ಸಚಿವ ಸ್ಥಾನ : ಸಹಕಾರಿಗಳಿಗೆ ಸಂದ ಗೌರವ : ಶ್ರೀ ಪ್ರಭಾಕರ ಕೋರೆ**



ಕಾರ್ಯಕ್ರಮದಲ್ಲಿ ಮಾಜಿ ರಾಜ್ಯ ಸಭಾ ಸದಸ್ಯ ಹಾಗು ಹಿರಿಯ ಸಹಕಾರಿ ಶ್ರೀ ಪ್ರಭಾಕರ ಕೋರೆಯವರು ಮಾತನಾಡಿ ರಾಜ್ಯದ ಸಹಕಾರಿ ಇಲಾಖೆಯನ್ನು ಸಹಕಾರಿ ಕ್ಷೇತ್ರದ ಅನುಭವಿ, ಧುರೀಣ ಶ್ರೀಎಸ್.ಟಿ.ಸೋಮಶೇಖರವರಿಗೆ ವಹಿಸಿರುವುದು ಅತ್ಯಂತ ಸಂತೋಷದ ವಿಷಯ. ಇದು ಸಹಕಾರಿಗಳಿಗೆ ಸಂದ ಗೌರವ ಎಂದು ತಿಳಿಸಿ ಬೆಳಗಾವಿ ಸಹಕಾರಿ ಕ್ಷೇತ್ರದ ಬಗ್ಗೆ ಹಲವು ವಿಷಯಗಳನ್ನು ಪ್ರಸ್ತಾಪಮಾಡಿದರು.

**ಸಹಕಾರಿ ಕ್ಷೇತ್ರದ ಆಶಯ ಹಾಗೂ ಕಾರ್ಯವೈಖರಿ ಒಂದಾದಾಗ ಸಾಧನೆಗೆ ಮೆರಗು : ಶ್ರೀ ಗುರುನಾಥ ಜಾಂತಿಕರ**

ಸಂಯುಕ್ತ ಸಹಕಾರಿಯ ನಿರ್ದೇಶಕ ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಬೆಳೆದುಬಂದ ದಾರಿ ಈ ಕ್ಷೇತ್ರ ಬೆಳೆಸಲು ಅನೇಕ ಹಿರಿಯರು ಮಾಡಿದ ಹೋರಾಟ ಹಾಗೂ ಶ್ರಮಗಳನ್ನು ಗೌರವಿಸಿ ಪ್ರಸಕ್ತ ಈ ಕ್ಷೇತ್ರದ ಉತ್ತಮ ಬೆಳವಣಿಗೆಗಳನ್ನು ಮೆಲಕುಹಾಕಿದಾಗ ಮಾತ್ರ ಸಾಧನೆಗೆ ಮಹತ್ವ ಬರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಒಟ್ಟಾರೆ ಸಹಕಾರಿ ಕ್ಷೇತ್ರ ಹಲವು ವಿಷಯಗಳನ್ನು ತಿಳಿಸಿದರು.



ಸಮಾರಂಭದ ಅಂಗವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರನ್ನು, ಶ್ರೀ ಪ್ರಭಾಕರ ಕೋರೆ, ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಶ್ರೀ ಮಹಾಂತೇಶ ಕವಟಗಿಮಠ, ಸಂಯುಕ್ತ ಸಹಕಾರಿಯ ನಿರ್ದೇಶಕರು, ಬೆಳಗಾವಿ ಪ್ರಾಂತ್ಯದ ಜಂಟಿ ನಿಬಂಧಕ ಶ್ರೀ ಜಿ.ಎನ್.ಪಾಟೀಲ್, ಉಪನಿಬಂಧಕರಾದ ಶ್ರೀ ಕೆ. ಎಲ್. ಶ್ರೀನಿವಾಸ, ಧಾರವಾಡ ಉಪನಿಬಂಧಕರಾದ ಶ್ರೀಮತಿ ಆರ್.ಟಿ.ಪೋಳ, ಸಹಾಯಕ ನಿಬಂಧಕರಾದ ಶ್ರೀ ರವೀಂದ್ರನಾಥ ಪಾಟೀಲ್ ಮತ್ತು ಹಲವಾರು ಇಲಾಖಾಧಿಕಾರಿಗಳು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ಹಾಗೂ ಹಿರಿಯ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆ, ಶ್ರೀ ಶ್ರೀಕಾಂತ ಬರುವೆ ಶ್ರೀ ರಘುನಂದನ ಹೆಗಡೆ, ಶ್ರೀ ಬಸವರಾಜ ಹೊಂಗಲ್ ಶ್ರೀ ವಿ.ಜೆ ಕಾರಕೂನ ಮುಂತಾದವರು ಭಾಗವಹಿಸಿದ್ದರು. ಬೆಳಗಾವಿ ಪ್ರಾಂತ್ಯದಿಂದ ಹಾಗೂ ರಾಜ್ಯದ ವಿವಿಧ ಭಾಗಗಳಿಂದ 1500ಕ್ಕೂ ಸಹಕಾರಿಗಳು ಭಾಗವಹಿಸಿದ್ದರು.



ಧ್ವಜಾರೋಹಣ



ಮಾನ್ಯ ಸಹಕಾರ ಸಚಿವರ ಆಗಮನ



ಮಾನ್ಯ ಸಹಕಾರ ಸಚಿವರಿಗೆ ಪೂರ್ಣ ಕುಂಬ ಸ್ವಾಗತ



ಶ್ರೀ ಎಸ್.ಟಿ ಸೋಮಶೇಖರ, ಸಹಕಾರ ಸಚಿವರಿಂದ ಬೆಳಗಾವಿ ಪ್ರಾಂತೀಯ ಕಛೇರಿ ಉದ್ಘಾಟನೆ



ಶ್ರೀ ಪ್ರಭಾಕರ ಕೋರೆ ಇವರಿಂದ ಬೆಳಗಾವಿ ಪ್ರಾಂತೀಯ ಕಛೇರಿಯ ನ್ಯಾಯಾಲಯ ಸಭಾಂಗಣ ಉದ್ಘಾಟನೆ

## ಬೆಳಗಾವಿ ಪ್ರಾಂತದ ನೂತನ ಕಟ್ಟಡದ ಪ್ರವೇಶ ಪೂಜಾ ಕಾರ್ಯಕ್ರಮ



**ಬೆಳಗಾವಿ :** ಬೆಳಗಾವಿ ಪ್ರಾಂತದ ಕಛೇರಿಯ ನೂತನ ಕಟ್ಟಡದ ಪೂಜಾ ಕಾರ್ಯಕ್ರಮವು ದಿನಾಂಕ 06 ಏಪ್ರಿಲ್ 2022 ರಂದು ನೂತನ ಕಟ್ಟಡದಲ್ಲಿ ಜರುಗಿರುತ್ತದೆ. ಪೂಜಾ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ದಂಪತಿಗಳು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ದಂಪತಿಗಳು ಪಾಲ್ಗೊಂಡಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ. ಎನ್.ಪಾಟೀಲ, ಶ್ರೀ ಸಿದ್ರಾಮಪ್ಪಾ ಚ ಉಪ್ಪಿನ್, ಶ್ರೀ ಮಾರುತಿ ಬಿ. ಕಲಾಲ, ಶ್ರೀ ರವಿ ಯಲಿಗಾರ, ಶ್ರೀಮತಿ ಸರಸ್ವತಿ ಎನ್. ರವಿ, ಶ್ರೀ ನಾಗರಾಜ ದೇಶಪಾಂಡೆ ದಂಪತಿಗಳು, ಸಂಘದ ಪ್ರಮುಖರಾದ ಶ್ರೀ ಅರವಿಂದರಾಯ ದೇಶಪಾಂಡೆಜಿ, ಶ್ರೀ ರಾಘವೇಂದ್ರ ಕಾಗವಾಡಜಿ, ಸೇರಿದಂತೆ ಸಂಘದ ಹಾಗೂ ಸಹಕಾರ ಭಾರತಿಯ ಪ್ರಮುಖರು, ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪುರ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ ಕವಟಗಿಮಠ, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರುಗಳಾದ ಶ್ರೀ ರಾವಸಾಹೇಬ ಪಾಟೀಲ, ಶ್ರೀ ಶ್ರೀಕಾಂತ ಹತನೂರೆ, ಶ್ರೀ ಸಾಗರ ಚವಾಜ, ಶ್ರೀ ಚಂದ್ರಕಾಂತ ಪಡಚನ್ನವರ ಸೇರಿದಂತೆ ಅನೇಕ ಸಹಕಾರಿ ಗಣ್ಯರು ಉಪಸ್ಥಿತರಿದ್ದರು



ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರಿಂದ ಪೂಜಾ ಕಾರ್ಯಕ್ರಮ



ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರಿಂದ ಪೂಜಾ ಕಾರ್ಯಕ್ರಮ




ಸಂಯುಕ್ತ ಸಹಕಾರಿಯ ಮಾನ್ಯ ಹಾಲಿ ಮತ್ತು ಮಾಜಿ ನಿರ್ದೇಶಕರಿಗೆ ಹಾಗೂ ಹಿರಿಯ ಸಹಕಾರಿಗಳಿಗೆ ಸನ್ಮಾನ

## ಪತ್ರಿಕಾಗೋಷ್ಠಿ




**ಬೆಳಗಾವಿ :** ದಿನಾಂಕ 19 ಏಪ್ರಿಲ್ 2022ರಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಳಗಾವಿ ಇಲ್ಲಿ ಸಂಯುಕ್ತ ಸಹಕಾರಿ ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ಪತ್ರಿಕಾ ಗೋಷ್ಠಿ ನಡೆಯಿತು. ಗೋಷ್ಠಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಮತ್ತು ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಪತ್ರಿಕಾ ಗೋಷ್ಠಿಯನ್ನು ನಡೆಸಿಕೊಟ್ಟರು. ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ವಾಯ್.ಟಿ.ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಪೆ, ಶ್ರೀ ಬಸವರಾಜ ಎಸ್. ಇವರು ಉಪಸ್ಥಿತರಿದ್ದರು.

ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ಮಾತನಾಡುತ್ತಾ ದೇಶದ ಶೇ.95% ರಷ್ಟು ಗ್ರಾಮಗಳಲ್ಲಿ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ದೇಶದಲ್ಲಿ ಸಹಕಾರಿ ಚಳುವಳಿಗೆ 118 ವರ್ಷಗಳ ಇತಿಹಾಸವಿದೆ. ಪ್ರಸ್ತುತ ಬೆಳಗಾವಿ ಪ್ರಾಂತದಲ್ಲಿ 2544 ಸೌಹಾರ್ದ ಸಹಕಾರಿಗಳು ನೋಂದಣಿಗೊಂಡಿದ್ದು, 2048 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. 561 ಇ-ಸ್ಟ್ಯಾಂಪಿಂಗ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಛೇರಿಯ ನೂತನ ಕಟ್ಟಡ ಪೂರ್ಣಗೊಂಡಿದ್ದು 20 ಏಪ್ರಿಲ್ ರಂದು ಉದ್ಘಾಟನೆಗೊಳ್ಳಲಿದೆ. ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ ಇವರು ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ ಎಂದು ಹೇಳಿದರು.

## ನೂತನ ಕಟ್ಟಡ ನಿರ್ಮಾಣದಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು - ಶ್ರೀ ಶರಣಗೌಡ ಜಿ. ಪಾಟೀಲ

**ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗ ಕಟ್ಟಡ ನಿರ್ಮಾಣಕ್ಕೆ ಮಾರ್ಗದರ್ಶನ ಮಾಡಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಕರ, ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಸಂಜೀವ ಮಹಾಜನ, ಶ್ರೀ ವೈ.ಟಿ ಪಾಟೀಲ, ಶ್ರೀ ತಿಮ್ಮಯ್ಯ ಶೆಟ್ಟಿ, ಶ್ರೀ ಶ್ರೀಧರ, ಇವರುಗಳಿಗೆ ಹಾಗೂ ಈ ಪ್ರಾಂತ್ಯದ ಎಲ್ಲ ಸಹಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.**




**ಕಲಬುರಗಿ :** ದಿನಾಂಕ 23.04.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಕಲಬುರಗಿ ಜಿಲ್ಲಾ ಭವನದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿಯ ನೂತನ ಕಟ್ಟಡದ ಪ್ರವೇಶ ಪೂಜಾ ಕಾರ್ಯಕ್ರಮದ ಕುರಿತು ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಪತ್ರಿಕಾಗೊಷ್ಠಿಯಲ್ಲಿ ಮಾಧ್ಯಮದವರಿಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಶ್ರೀ ವೈ.ಟಿ ಪಾಟೀಲರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಇವರು ಉಪಸ್ಥಿತರಿದ್ದರು.



## ಶ್ರೀ ಪ್ರಕಾಶ ರಾವ್, ಸಹಕಾರ ಸಂಘಗಳ ಜಂಟಿ ನಿಬಂಧಕರು, (ಕಾನೂನು ಕೋಶ) ಹುದ್ದೆಗೆ ಅಧಿಕಾರ ಸ್ವೀಕಾರ

ದಿನಾಂಕ 06.04.2022 ರಂದು ಶ್ರೀ ಪ್ರಕಾಶ ರಾವ್, ಸಹಕಾರ ಸಂಘಗಳ ಜಂಟಿ ನಿಬಂಧಕರು, ಇವರು ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ (ಕಾನೂನು ಕೋಶ) ಹುದ್ದೆಗೆ ಅಧಿಕಾರ ವಹಿಸಿಕೊಂಡಿರುತ್ತಾರೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾರ್ದಿಕ ಸ್ವಾಗತವನ್ನು ಬಯಸುತ್ತದೆ.

## ಸಹಕಾರಿಗಳಿಗೆ ಕೃತಜ್ಞತೆ - ಶ್ರೀ ಜಗದೀಶ ಕವಟಗಿಮಠ

**ಬೆಳಗಾವಿ ಸೌಹಾರ್ದ ಸಹಕಾರಿಗಳ ಬೆಂಬಲ ಹಾಗೂ ಪ್ರೋತ್ಸಾಹದಿಂದ ಬೆಳಗಾವಿ ಪ್ರಾಂತೀಯ ಸಹಕಾರಿಯ ನೂತನ ಕಟ್ಟಡ ದಿನಾಂಕ 20.04.2022ರಂದು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ ರವರು ಉದ್ಘಾಟಿಸಿರುವುದು ನಮಗೆಲ್ಲಾ ಸಂತೋಷದ ಜೊತೆಗೆ ಗೌರವವೂ ಹೆಚ್ಚಿದೆ. ಪ್ರಾಂತೀಯ ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳು ಎಂದು ತಿಳಿಸಿದರು.**



ಶ್ರೀ ಜಗದೀಶ ಕವಟಗಿಮಠ ಇವರು ಮಾತನಾಡುತ್ತಾ ಕಳೆದ ಚುನಾವಣೆ ಸಂದರ್ಭದಲ್ಲಿ ಸಹಕಾರ ಕ್ಷೇತ್ರಕ್ಕೆ ಮತ್ತು ಮಾತನಾಡಿ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ಕೊಟ್ಟ ಮಾತಿನಂತೆ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಮತ್ತು ಹೊಸ ಯೋಜನೆ ಜಾರಿಯಲ್ಲಿ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಮುಂದಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಹಕಾರಿ ಕ್ಷೇತ್ರದಲ್ಲಿ ದಾಖಲಾಗುವ ಪ್ರಕರಣಗಳ ಇತ್ಯರ್ಥಕ್ಕಾಗಿ ಬೆಂಗಳೂರಿಗೆ ಅಲೆಯುವ ಪರಿಸ್ಥಿತಿಯನ್ನು ತಪ್ಪಿಸುವ ನಿಟ್ಟಿನಲ್ಲಿ ಬೆಳಗಾವಿಗೆ ಸಂಚಾರಿ ನ್ಯಾಯಾಲಯ ಮಂಜೂರು ಮಾಡಿಸಿಕೊಂಡು ಅದೀಗ ಕಾರ್ಯನಿರ್ವಹಿಸುತ್ತಿರುವುದು. ಸಹಕಾರಿಗಳ ಸಮಯ ಮತ್ತು ಖರ್ಚುವೆಚ್ಚಗಳನ್ನು ತಪ್ಪಿಸಿದ ಹೆಮ್ಮೆ ನಮಗಿದೆ ಜೊತೆಗೆ ಈವರೆಗೂ ಸ್ವಂತ ಜಾಗ ಮತ್ತು ಕಟ್ಟಡವಿಲ್ಲದೆ ಕಛೇರಿ ಮತ್ತು ಸಹಕಾರಿಗಳಿಗೆ ಕಾಡುತ್ತಿದ್ದ ಅನಾಥ ಪ್ರಜ್ಞೆಯನ್ನೂ ಹೊಸ ಕಟ್ಟಡ ನಿರ್ಮಿಸುವ ಮೂಲಕ ಹೋಗಲಾಡಿಸಿರುವುದು ಸಾರ್ಥಕತೆ ಭಾವ ಮೂಡಿಸುತ್ತಿದೆ,. 10 ಗುಂಟೆ ಜಾಗ ಖರೀದಿಸಿ ಕಟ್ಟಡ ನಿರ್ಮಾಣ ಮತ್ತು ಒಳಾಂಗಣ ವ್ಯವಸ್ಥೆ ಸೇರಿದಂತೆ ಒಟ್ಟು 4.5 ಕೋಟಿ ರೂ. ಖರ್ಚು ಮಾಡಲಾಗಿದೆ. ಮುಂದಿನ 25 ವರ್ಷಗಳ ನಿರ್ವಹಣೆ ದೃಷ್ಟಿಯಿಂದ ಸುಸಜ್ಜಿತವಾದ ಮಾದರಿ ಕಟ್ಟಡ ನಿರ್ಮಿಸಲಾಗಿದೆ. ವಿಭಾಗೀಯ ಕಛೇರಿಯು ಟಾಸ್ಕಫೋರ್ಸ್ ವಿಭಾಗ, ನ್ಯಾಯಾಲಯ, ತರಬೇತಿ ಕೇಂದ್ರ ಸೇರಿದಂತೆ, ಸಹಕಾರಿ ಸ್ನೇಹಿ ಕಟ್ಟಡ ನಿರ್ಮಿಸಲಾಗಿದೆ ಎಂದು ಅವರು ತಿಳಿಸಿದರು. ಇಡೀ ರಾಜ್ಯದ ಸಹಕಾರ ಕ್ಷೇತ್ರ ಬೆಳಗಾವಿ ವಿಭಾಗದ ಸಹಕಾರಿಗಳ ಸಂಖ್ಯೆ ಮತ್ತು ಕ್ರೀಯಾಶೀಲತೆ ಪಾತ್ರ ಹೆಚ್ಚಿದೆ. ರಾಜ್ಯದಲ್ಲಿನ 5000 ಸಾವಿರಕ್ಕೂ ಅಧಿಕ ಸಹಕಾರಿಗಳ ಪೈಕಿ ಬೆಳಗಾವಿ ವಿಭಾಗದಲ್ಲಿ 2 ಸಾವಿರಕ್ಕೂ ಹೆಚ್ಚಿದ್ದರೆ ಬೆಳಗಾವಿ ಜಿಲ್ಲೆಯಲ್ಲಿಯೇ ಸಾವಿರಕ್ಕೂ ಅಧಿಕ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ಹಾಗಾಗಿ ಇಡೀ ರಾಜ್ಯದಲ್ಲಿ ಬೆಳಗಾವಿ ವಿಭಾಗ ಮತ್ತು ಬೆಳಗಾವಿ ಜಿಲ್ಲೆ ಕೂಡ ಮಾದರಿಯಾಗಿ ನಿಂತಿದೆ. ಈ ಮಾದರಿಯನ್ನು ಎಲ್ಲಾ ವಿಭಾಗ ಮತ್ತು ಜಿಲ್ಲೆಗಳಲ್ಲಿ ವಿಸ್ತರಿಸಲು ಮತ್ತು ಎಲ್ಲಾ ಸಹಕಾರಿಗಳನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ತರಬೇತಿ ಕಾರ್ಯಾಗಾರಗಳನ್ನು ಕೂಡ ನಿಯಮಿತವಾಗಿ ಹಮ್ಮಿಕೊಳ್ಳಲಾಗಿದೆ. ಸಹಕಾರಿ ಸಂಸ್ಥೆಗಳ ಅಧಿಕಾರಿಗಳು, ಸಿಬ್ಬಂದಿಗಳಿಗೆ ಮಾತ್ರ ತರಬೇತಿ ಮೀಸಲು ಮಾಡದೇ ಸಿಬ್ಬಂದಿಯಿಂದ ಹಿಡಿದು ಮುಖ್ಯಕಾರ್ಯನಿರ್ವಾಹಕರು, ಅಧ್ಯಕ್ಷರಿಂದ ನಿರ್ದೇಶಕರವರೆಗೂ ಮತ್ತು ಬರುವ ದಿನಗಳಲ್ಲಿ ಸದಸ್ಯರಿಗೂ ತರಬೇತಿ ನೀಡಿ ಸಹಕಾರದ ಸಂಪೂರ್ಣ ಜ್ಞಾನ ಹಂಚಿಕೆ ಮಾಡಿ ಇಡೀ ಕ್ಷೇತ್ರವನ್ನು ಪರಸ್ಪರ ಸಹಕಾರದಿಂದಲೇ ಬಲಪಡಿಸುವ ಗುರಿ ನಮ್ಮ ಮುಂದಿದೆ ಎಂದು ಹೇಳಿದರು.

# ಕಲಬುರಗಿ ಪ್ರಾಂತದ ನೂತನ ಕಟ್ಟಡದ ಪ್ರವೇಶ ಪೂಜಾ ಕಾರ್ಯಕ್ರಮ




**ಕಲಬುರಗಿ :** ದಿನಾಂಕ 24.04.2022ರಂದು ಕಲಬುರಗಿ ಪ್ರಾಂತೀಯ ಕಛೇರಿಯ ನೂತನ ಕಟ್ಟಡದ ಪೂಜಾ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ವಿಶ್ವನಾಥ ಚ ಹಿರೇಮಠ, ಶ್ರೀ ಸಂಜೀವ ಮಹಾಜನ, ಶ್ರೀ ವೈ.ಟಿ ಪಾಟೀಲ ಶ್ರೀ ಆರ್ ತಿಮ್ಮಯ್ಯಶೆಟ್ಟಿ, ಶ್ರೀಮತಿ ಸರಸ್ವತಿ ಎನ್ ರವಿ, ಮಾಜಿ ನಿರ್ದೇಶಕರಾದ ಶ್ರೀ ಎಲ್ ಎಸ್ ಆನಂದ, ಶ್ರೀ ಬಿ.ರಾಜಶೇಖರ ಹಾಗೂ ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ ಆಗಮಿಸಿದ್ದರು.

ಸ್ವಾಗತವನ್ನು ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಮಾಡಿದರು. ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನುಡಿದರು. ವಂದನಾರ್ಪಣೆಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು, ನಿರೂಪಣೆಯನ್ನು ಹಿರಿಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಾಡಿದರು. ಕಾರ್ಯಕ್ರಮದಲ್ಲಿ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ. ದಾವಾ ಪಂಚಾಯತ ನ್ಯಾಯಾಲಯದ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರ, ಶ್ರೀ ಸಂಜಯ ಕೋರಟಕರ್, ಕೇಂದ್ರ ಕಛೇರಿಯ ಮತ್ತು ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು, ನಗರದ ಪ್ರಮುಖ ಗಣ್ಯರು, ಹಾಗೂ ಇಲಾಖೆಯ ಅಧಿಕಾರಿಗಳು ಹಾಗೂ ಕಲಬುರಗಿ ಪ್ರಾಂತದ 7 ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು





ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಹಾಗೂ ಮಾಜಿ ನಿರ್ದೇಶಕರಾದ ಶ್ರೀ ಎಲ್ ಎಸ್ ಆನಂದ ಇವರಿಗೆ ಸಂಯುಕ್ತ ಸಹಕಾರಿಯಿಂದ ಸನ್ಮಾನಿಸಲಾಯಿತು.





ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ ಮಾಣಿಕಪ್ರಭು ಸೌಹಾರ್ದ ಸಹಕಾರಿಯಿಂದ ಸನ್ಮಾನಿಸಿದರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ.ರಾಜಶೇಖರ ರವರಿಗೆ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

## ರಾಷ್ಟ್ರೀಯ ಸಹಕಾರ ನೀತಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ

ಕೇಂದ್ರದಲ್ಲಿ ನೂತನ ಸಹಕಾರ ಸಚಿವಾಲಯ ಸ್ಥಾಪನೆಗೊಂಡ ಹಿನ್ನೆಲೆಯಲ್ಲಿ ಕೇಂದ್ರ ಸಹಕಾರ ಸಚಿವರಾಗಿ ಕೇಂದ್ರ ಗೃಹ ಸಚಿವ ಶ್ರೀ ಅಮಿತ ಶಾ ರವರು ಹಲವಾರು ಪ್ರಗತಿಪರ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಹಕಾರ ಕ್ಷೇತ್ರದ ಅಭಿವೃದ್ಧಿಯತ್ತ ಗಮನ ಹರಿಸಿದ್ದಾರೆ. ದೇಶದಲ್ಲಿ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆ, ಪ್ರತಿ ಹಳ್ಳಿಗೊಂದು ಕೃಷಿ ಪತ್ತಿನ ಸಹಕಾರ ಸಂಘ, ರಾಷ್ಟ್ರೀಯ ಸಹಕಾರ ನೀತಿ ಜಾರಿಗೊಳಿಸುವುದು, ದೇಶದ ಭ್ರಷ್ಟಾಚಾರ ತಡೆಗೆ ದೇಶವ್ಯಾಪಿ ಏಕರೂಪ ಸಾಫ್ಟವೇರ್ ಸ್ಥಾಪನೆ ಹಾಗು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ದೇಶದಲ್ಲಿ ಸಹಕಾರ ಕ್ಷೇತ್ರ ಔಟಡೇಟ ಆಗಿಲ್ಲ. ಅದನ್ನು ನಿರಂತರ ಅಪಡೇಟ್ ಮಾಡುತ್ತಲಿದ್ದೇವೆ ಎಂಬ ಅಭಿಪ್ರಾಯವನ್ನು ದಿನಾಂಕ 1/4/2022ರಂದು ಬೆಂಗಳೂರಿನಲ್ಲಿ ನಡೆದ ಸಹಕಾರಿ ಸಮ್ಮೆಳನದಲ್ಲಿ ಬಹಿರಂಗವಾಗಿ ತಿಳಿಸಿದ್ದಾರೆ. ಅದರ ಜೊತೆಗೆ ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮ ಸಾಧನೆ ಮಾಡಿದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಮ್ಮ ಭಾಷಣದಲ್ಲಿ ಹೇಳಿರುವುದು ಕರ್ನಾಟಕದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಸ್ಫೂರ್ತಿ ತಂದಿದೆ.

ರಾಷ್ಟ್ರೀಯ ಸಹಕಾರ ನೀತಿ ಜಾರಿಗೋಸ್ಕರವಾಗಿ ದಿನಾಂಕ 08.04.2022 ರಂದು ದೆಹಲಿಯಲ್ಲಿ ಕೇಂದ್ರದ ಸಹಕಾರ ಸಂಘಗಳ ನಿಬಂಧಕರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಭಾಗವಹಿಸಿ ರಾಷ್ಟ್ರೀಯ ಸಹಕಾರ ನೀತಿಯ ಅಗತ್ಯತೆ, ಅದರ ಸ್ವರೂಪ ಅದರ ಕಾರ್ಯಾಚರಣೆ ಹೇಗಿರಬೇಕು ಅದಕ್ಕೆ ಎಲ್ಲ ರಾಜ್ಯಗಳ ಸ್ಪಂದನೆಗೆ ಹಾಗೂ ಅನುಷ್ಠಾನಕ್ಕೆ ಮಾರ್ಗಸೂಚಿಗಳ ಸಿದ್ಧತೆ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮತ್ತು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ವಿವರಿಸಿ ಈ ಮಾದರಿ ವ್ಯವಸ್ಥೆಯನ್ನು ದೇಶಾದ್ಯಂತ ಜಾರಿಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು.

## ಸ್ವರಾಜ್ಯ -75 ಸ್ವಾತಂತ್ರ್ಯ ಹೋರಾಟಗಾರರಿಗೆ ಹಾಲು ಗಲ್ಲದ ಹಸುಳೆಗಳು. ಅವಳ ಸಹೋದರರು ಚಿ. ಅರುಣ ಹಾಗೂ ಚಿ. ಕರುಣ ರ್‍ಯಾಕಲೆಯವರುಗಳ ಔರಾದದಿಂದ ಮಲೈ ಮಹದೇಶ್ವರ ಬೆಟ್ಟದ ವರೆಗೆ ಯಶಸ್ವಿ ಸೈಕಲ್ ಯಾತ್ರೆಯ ಮೂಲಕ ನಮನ





ಸಾಧನೆಗೆ ಯಾವುದೆ ವಯಸ್ಸಿನ ಮಿತಿ ಇಲ್ಲ ಯಾವ ವಯಸ್ಸಿನಲ್ಲಾದರೂ ಸಾಧಿಸಬಹುದು. ಅದರಲ್ಲೂ ಚಿಕ್ಕ ವಯಸ್ಸಿನಲ್ಲಿ ಮಾಡುವ ಸಾಧನೆ ಇಡೀ ಜೀವನಕ್ಕೆ ಸ್ಫೂರ್ತಿ, ಮಾರ್ಗದರ್ಶನ ಹಾಗೂ ಅಪಾರ ಅನುಭವವನ್ನ ತಂದು ಕೊಡುತ್ತದೆ ಎಂಬುದಕ್ಕೆ ಜ್ವಲಂತ ನಿದರ್ಶನ ಚಿ. ಅರಣ ಹಾಗೂ ಚಿ.ಕರುಣ.

ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸೂರ್ಯಕಾಂತ ರ್‍ಯಾಕಲೆಯವರ ಸಹೋದರನ ಪುತ್ರರುಗಳಾದ ಚಿ.ಅರುಣ ಹಾಗು ಚಿ. ಕರುಣ ರ್‍ಯಾಕಲೆಯವರುಗಳು ಇದೇ ದಿನಾಂಕ 03–04–2022 ರಿಂದ ಬೀದರ ಜಿಲ್ಲೆಯ ಔರಾದದಿಂದ ಪ್ರಾರಂಭಿಸಿ ಮಲೈ ಮಹದೇಶ್ವರ ಬೆಟ್ಟದ ವರೆಗೆ ಸೈಕಲ್ ಮೇಲೆ ಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿರುವುದು ಯುವ ಜನಾಂಗದವರು ಅಚ್ಚರಿ ಹಾಗು ಹೆಮ್ಮೆಪಡುವುದರ ಜೊತೆಗೆ ಈ ಸಹೋದರರ ಧೈರ್ಯ ಹಾಗೂ ಸಾಹಸವನ್ನು ಮೆಚ್ಚಿ ಸಂತೋಷ ವ್ಯಕ್ತಪಡಿಸಿದ್ದಾರೆ. ಅವರನ್ನು ಹಾರೈಸಿದ್ದಾರೆ.

ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಗೋಡಂಪಳ್ಳಿ ಗ್ರಾಮದ

ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯಲ್ಲಿ ಇದೀಗ 9ನೇ ತರಗತಿಯಲ್ಲಿ ಯಶಸ್ವಿಯಾಗಿ ತೇರ್ಗಡೆಯಾಗಿ 10ನೇ ತರಗತಿಗೆ ಪಾದಾರ್ಪಣೆ ಮಾಡಿರುವ ಈ ಸಹೋದರರು ದಿನಾಂಕ 03-04-2022 ರಂದು ಔರಾದಿನ ಅಮರೇಶ್ವರ ದೇವಾಲಯದಿಂದ ತಮ್ಮ ಸೈಕಲ್ ಯಾತ್ರೆಯನ್ನು ಪ್ರಾರಂಭಿಸಿ ಹುಮ್ನಾಬಾದ್, ಕಲಬುರಗಿ, ಜೇವರಗಿ, ಶಾಹಪುರ, ಬಳ್ಳಾರಿ, ತುಮಕೂರು, ಬೆಂಗಳೂರು, ರಾಮನಗರ, ಮದ್ದೂರು, ಕೊಳ್ಳೆಗಾಲ, ಕವದಳ್ಳಿ ಮಾರ್ಗವಾಗಿ ಒಟ್ಟಾರೆ 1250 ಕಿ.ಮಿ. ಪ್ರವಾಸವನ್ನು 24 ದಿನಗಳಲ್ಲಿ ಪೂರೈಸಿದ್ದಾರೆ. ಪ್ರತಿದಿನ ಬೆಳಿಗ್ಗೆ 6-30 ಕ್ಕೆ ಪ್ರಾರಂಭಿಸಿ ರಾತ್ರಿ 10-30ರವರೆಗೆ ಸೈಕಲ್ ಪ್ರವಾಸ. ನಂತರ ವಿಶ್ರಾಂತಿ ಹಾಗು ಊಟೋಪಚಾರ. ನಂತರ ಮತ್ತೆ 3-00 ರಿಂದ ಸಂಜೆ 6-30 ರವರೆಗೆ ಸೈಕಲ್ ಪ್ರವಾಸ ಮಾಡಿ ಸದರಿ ಸ್ಥಳದಲ್ಲಿ ತಂಗಲು ಮಠ, ಸಂಬಂಧಿಕರ ಮನೆ, ಎ.ಬಿ.ವಿ.ಪಿ. ಹಾಗೂ ಆರ್.ಎಸ್.ಎಸ್ ನವರ ಸಹಕಾರದಿಂದ ವಸತಿ ವ್ಯವಸ್ಥೆ ಊಟ ಉಪಹಾರಗಳ ವ್ಯವಸ್ಥೆಯನ್ನು ಉಪಯೋಗಿಸಿ ತಮ್ಮ ಪ್ರವಾಸವನ್ನು ಯಶಸ್ವಿಯಾಗಿ ಮಾಡಿರುವುದು ಅತ್ಯಂತ ಹೆಮ್ಮೆಯ ವಿಷಯ. ಮಾರ್ಗದಲ್ಲಿ ಅನೇಕ ಜನರ ಸಹಕಾರ ಅನೇಕರಿಂದ ಗೌರವ ಸ್ವೀಕಾರ ಸಹಕಾರ ಸಹಾಯ ಮಾಡಿದವರಿಗೆಲ್ಲ ಕೃತಜ್ಞತೆಗಳನ್ನು ತಿಳಿಸುತ್ತ ಪ್ರವಾಸ ಮುಕ್ತಾಯ ಮಾಡಿ ಸಂಯುಕ್ತ ಸಹಕಾರಿಯ ಅಧ್ಯಕ್ಷರನ್ನು ಹಾಗೂ ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿಮಾಡಿ ತಮ್ಮ ಅನುಭವವನ್ನು ಹಂಚಿಕೊಂಡರು.

**ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರಿಂದ ಸನ್ಮಾನ ಹಾಗೂ ಶುಭ ಹಾರೈಕೆ.**

ಸಂಯುಕ್ತ ಸಹಕಾರಿಯ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ. ಪಾಟೀಲ್ ರವರು ಈ ಸಹೋದರರನ್ನು ಶಾಲು ಹಾಗು ಹಾರ ಹಾಕಿ ಮೊಮೆಂಟೊ ನೀಡಿ ಗೌರವಿಸಿದರು ಹಾಗೂ ಅವರ ಸಾಧನೆಯನ್ನು ಮೆಚ್ಚಿ ಅವರಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಇಷ್ಟು ಚಿಕ್ಕ ವಯಸ್ಸಿನಲ್ಲಿ ಇವರ ಧೈರ್ಯ ಮೆಚ್ಚುವಂತಹದ್ದು. ಇವರ ಸಾಧನೆ ಶ್ಲಾಘನೀಯ ಹಾಗು ಇವರ ದೇಶ ಭಕ್ತಿ, ಸ್ವಾಂತತ್ರ ಹೋರಾಟಗಾರರಿಗೆ ವಿಶಿಷ್ಠ ರೀತಿಯಲ್ಲಿ ನಮನ ಸಲ್ಲಿಸುವ ಇವರು ಇತರರಿಗೆ ಸ್ಫೂರ್ತಿ ಹಾಗೂ ಮಾದರಿಯಾಗಿದ್ದಾರೆ ಎಂದು ಅವರುಗಳಿಗೆ ಶುಭ ಕೋರಿದರು.

## ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ ಸೌಹಾರ್ದ ಸಂಗಮ-2022



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಜಂಟಿ ಆಶ್ರಯದಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ ಸೌಹಾರ್ದ ಸಂಗಮ-2022"ಈ ಕಾರ್ಯಕ್ರಮವನ್ನು ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಹಂಗಾರಕಟ್ಟೆ ಚೇತನಾ ಹೈಸ್ಕೂಲ್ ಕ್ರೀಡಾಂಗಣದಲ್ಲಿ ದಿನಾಂಕ 17ನೇ ಏಪ್ರಿಲ್ 2021 ರಂದು ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ 135 ಸೌಹಾರ್ದ ಸಹಕಾರಿಗಳಿಂದ 1500ಕ್ಕೂ ಅಧಿಕ ಸಹಕಾರಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಮೆರಗನ್ನು ಹೆಚ್ಚಿಸಲು ಕಾಪು, ಉಡುಪಿ, ಬ್ರಹ್ಮಾವರ, ಬೈಂದೂರು, ಹೆಬ್ರಿ & ಕಾರ್ಕಳ, ಕುಂದಾಪುರ ಈ ತಾಲೂಕುಗಳನ್ನು 7 ವಲಯಗಳನ್ನಾಗಿ ರಚಿಸಿ ಸಹಕಾರಿ ಧ್ವಜದ 7 ಬಣ್ಣಗಳ ಸಮವಸ್ತ್ರ ಧರಿಸಿ, ಸಹಕಾರಿಯ ಧ್ವಜ ಹಿಡಿದು ಪಥ ಸಂಚಲನ ಅತ್ಯಂತ ಶಿಸ್ತು ಬದ್ಧವಾಗಿ ನಡೆಯಿತು. ಈ ಪಥ ಸಂಚಲನದ ಮುಖ್ಯ ಪಥವಾಗಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಯ ನಿರ್ದೇಶಕರೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲೋಹಿತ್ ಜಿ ಸಾಲಿಯಾನ್ ಮೊದಲ ಪಥದಲ್ಲಿದ್ದರು. ಕ್ರೀಡೋತ್ಸವದ ಚಾಲನೆಯನ್ನು ಕ್ರೀಡಾ ಜ್ಯೋತಿಯನ್ನು ಪ್ರಜ್ವಲಿಸುವ ಮೂಲಕ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ಚಾಲನೆ ನೀಡಿದರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು, ಶ್ರೀ ಎಂ ಎನ್ ರಾಜೇಂದ್ರ ಕುಮಾರ್, ಈ ಸಂದರ್ಭ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಕ್ಯಾಂಪ್ಕೋನ ಅಧ್ಯಕ್ಷರು ಕಿಶೋರ್ ಕುಮಾರ್ ಕೊಡ್ಗಿ, ಮಹಾಲಕ್ಷ್ಮಿ ಕೋ-ಆಪರೇಟಿವ್ ಬ್ಯಾಂಕ್‌ನ ವ್ಯವಸ್ಥಾಪಕರು, ಚೇತನಾ ಪ್ರೌಢ ಶಾಲೆಯ ಅಧ್ಯಕ್ಷರಾದ ಭರತ್ ಕುಮಾರ್, ಒಕ್ಕೂಟದ ಅಧ್ಯಕ್ಷರಾದ ಎಸ್. ಭಾಸ್ಕರ್ ಕಾಮಾತ್, ಸಂಯುಕ್ತ ಸಹಕಾರಿ ಪ್ರಧಾನ ವ್ಯವಸ್ಥಾಪಕರಾದ ಶರಣಗೌಡ ಜಿ. ಪಾಟೀಲ

ಹಾಗೂ ಶ್ರೀ ಪಿ. ಜಗನ್ನಾಥ ಶೆಟ್ಟಿ ಕ್ರೀಡಾ ಸಂಚಾಕರು ಹಾಗೂ ಈ ಸಂದರ್ಭದಲ್ಲಿ ಸಹಕಾರ ರತ್ನ ಪುರಸ್ಕೃತರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರನ್ನು ಸನ್ಮಾನಿಸಲಾಯಿತು. ಮಧಾಹ್ನ ಸಮಯದಲ್ಲಿ ಸಂಚಿಕೆ ಬಿಡುಗಡೆಯನ್ನು ಶ್ರೀಮತಿ ಅರುಣ ಕೃಷ್ಣಾರೆಡ್ಡಿ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿ ನೆರವೇರಿಸಿದರು. ಹಾಗೂ ಶ್ರೀ ಬೋಳ ಸದಾಶಿವ ಶೆಟ್ಟಿ, ವೃತ್ತಿಪರ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರ ಅಧ್ಯಕ್ಷತೆಯನ್ನು ವಹಿಸಿದರು. ಶ್ರೀ ರಾಜು ಪೂಜಾರಿ, ನಿರ್ದೇಶಕರು ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಶ್ರೀ ಸುಧೀಶ್ ನಾಯಕ್, ಸೌಹಾರ್ದ ಸಂಗಮ –2022 ಆರ್ಥಿಕ ಸಮಿತಿ ಸಂಚಾಲಕರು, ಐರೋಡಿ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಗೀತಾ ಶೆಟ್ಟಿ, ಮುಂತಾದವರು ಉಪಸ್ಥಿತರಿದ್ದರು.

ಈ ಕ್ರೀಡಾಕೂಟ ಮುಖ್ಯ ಅಂಗವಾದ ವಾಲಿಬಾಲ್, ತ್ರೋಬಾಲ್ (ಮಹಿಳೆಯರಿಗೆ), ಶಟಲ್ (ಮಹಿಳೆಯರಿಗೆ ಮತ್ತು ಗಂಡಸರಿಗೆ), ಓಟಗಳು (ಮಹಿಳೆಯರಿಗೆ ಮತ್ತು ಗಂಡಸರಿಗೆ), ಗುಂಡು ಎಸೆತ, ನಡೆಯಿತು ಇದರಲ್ಲಿ ಪಥ ಸಂಚಲನದಲ್ಲಿ ಅತ್ಯಂತ ಶಿಸ್ತು ಬದ್ಧದಲ್ಲಿ ಬ್ರಹ್ಮಾವರ ವಲಯಕ್ಕೆ ಪ್ರಥಮ ಸ್ಥಾನ ಮತ್ತು ದ್ವಿತೀಯ ಸ್ಥಾನ ಉಡುಪಿ ವಲಯಕ್ಕೆ ಹಾಗೂ ಮಾನ್ ಆಫ್ ಮಾಚ್ ಮಹಿಳೆಯರಿಗೆ ಮತ್ತು ಗಂಡಸರ ವಿಭಾಗದಲ್ಲಿ ಕಾಪು ವಲಯ ಪಡೆದುಕೊಂಡಿರು, ಉತ್ತಮ ಅಂಕ ಪಟ್ಟಿಯಲ್ಲಿ ಬ್ರಹ್ಮಾವರ ವಲಯ ಪ್ರಥಮ ಸ್ಥಾನ ದ್ವಿತೀಯ ಸ್ಥಾನ ಕಾಪು ವಲಯ ತನ್ನದಾಗಿಸಿಕೊಂಡಿತು ಹಾಗೂ ಸಮಾರೋಪ ಸಮಾರಂಭದಲ್ಲಿ ಸಹಕಾರ ಮಹಾಮಂಡಳ ಬೆಂಗಳೂರು ಇದರ ಮಾನ್ಯ ನಿರ್ದೇಶಕರು ಜಯಕರ್ ಶೆಟ್ಟಿ ಇಂದ್ರಾಳಿ ಇಚರು ಭಾಗವಹಿಸಿ ವಿಜೇತ ತಂಡಗಳಿಗೆ ಪ್ರಸಸ್ತಿ ಫಲಕ ಹಾಗೂ ಅಭಿನಂದನಾ ಪತ್ರಗಳನ್ನು ವಿತರಿಸಿದರು.

## "4ನೇ ತಂಡದ "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ" (ಡಿ.ಸಿ.ಬಿ.ಎಮ್) 2ನೇ ಸಂಪರ್ಕ ವರ್ಗದ ವರದಿ

**ಉಡುಪಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ವತಿಯಿಂದ ನಡೆಸುವ ಸಹಕಾರ ಹಾಗೂ ಬ್ಯಾಂಕಿಗ್ ಡಿಪ್ಲೋಮಾ ಕೋರ್ಸನ 4ನೇ ತಂಡದ ಎರಡನೆ ಸಂಪರ್ಕ ವರ್ಗ ತರಗತಿಗಳನ್ನು ದಿನಾಂಕ 23.04.2022 ಹಾಗೂ 24.04.2022 ರಂದು ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ, ತೆಂಕಿಲಾ, ಪುತ್ತೂರು ಇಲ್ಲಿ ಎರಡು ದಿನಗಳ ವರೆಗೆ ಆಯೋಜನೆ ಮಾಡಲಾಗಿತ್ತು ಸದರಿ ತರಗತಿಗಳಿಗೆ ದಕ್ಷಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಯ 78 ಶಿಭಿರಾರ್ಥಿಗಳು ಭಾಗವಹಿಸಿದ್ದರು. ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಮತ್ತು ಸಹಕಾರ ಪತ್ತು ನಿರ್ವಹಣೆ ವಿಷಯಗಳನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ವಿಷಯಗಳನ್ನು ಮಂಡಿಸಿದರು, ಬ್ಯಾಂಕಿಂಗ್ ಮೂಲ ಮಾಹಿತಿ ಹಾಗೂ ಅನ್ವಯಿಸುವ ಕಾಯ್ದೆಗಳ ಕುರಿತು ಶ್ರೀ ವಿಠ್ಠಲ ಶೆಟ್ಟಿ ರವರು ವಿಷಯ ಮಂಡಿಸಿದರು, ಭಾರತ ಸಂವಿಧಾನ ವಿಷಯವನ್ನು ಶ್ರೀ ವಸಂತ ಅಡ್ಯಂತಾಯ ರವರು ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ಶ್ರೀಮತಿ ಶೋಭಾ ಆರ್ ಹಾಗೂ ಮಾಹಿತಿ ತಂತ್ರಜ್ಞಾನ ವಿಷಯವನ್ನು ಶ್ರೀ ಶ್ರವಣಕುಮಾರ್ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

**ಚಿಕ್ಕೋಡಿ :** ದಿನಾಂಕ 23 ಮತ್ತು 24ರ ಏಪ್ರಿಲ್ 2022 ರಂದು ಚಿಕ್ಕೋಡಿಯ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಭಾ ಭವನದಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ 4ನೇ ತಂಡದ ಎರಡನೇಯ ಸಂಪರ್ಕ ವರ್ಗಗಳು ಜರುಗಿರುತ್ತವೆ.

ದಿನಾಂಕ 23 ಏಪ್ರಿಲ್ 2022 ರಂದು ಮೊದಲನೆಯ ಅವಧಿಗೆ ಶ್ರೀ ಶ್ರೀಕಾಂತ್ ಬರುವೆ ಇವರು ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಹಾಗೂ ಭಾರತದ ಸಂವಿಧಾನ ಹೆಚ್ಚುವರಿ ವಿಷಯದ ಕುರಿತು, ಎರಡನೇಯ ಅವಧಿಗೆ ಶ್ರೀ ಸತೀಶ ನಾಡಗೌಡ ಇವರು ಲೆಕ್ಕಪತ್ರಗಳು ಹಾಗೂ ಲೆಕ್ಕಪ–ರಿಶೋಧನೆ ವಿಷಯದ ಕುರಿತು, ಮೂರನೇಯ ಅವಧಿಗೆ ಶ್ರೀ ಶ್ರೀಕಾಂತ್ ಬರುವೆ ಇವರು ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಹಾಗೂ ಇತರೇ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಉಪನ್ಯಾಸಗಳನ್ನು ನಡೆಸಿಕೊಟ್ಟರು. ಚರ್ಚಾ ಅವಧಿಯನ್ನು ಶ್ರೀ ಶ್ರೀಕಾಂತ ಬರುವೆ ನಡೆಸಿದರು. ಇವರು ತರಗತಿಯಲ್ಲಿ 55 ಅಭ್ಯರ್ಥಿಗಳು ಹಾಜರಿದ್ದರು.

ದಿನಾಂಕ 24 ಎಪ್ರಿಲ್ 2022 ರಂದು ಮೊದಲನೆಯ ಅವಧಿಗೆ ಶ್ರೀ ಆರ್. ಎಸ್. ಪ್ರಕಾಶ ಇವರು ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಹಾಗೂ ಇತರೇ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು, ಎರಡನೇಯ ಅವಧಿಗೆ ಶ್ರೀ ಶಿವಾನಂದ ಕುಲಕರ್ಣಿ ಇವರು ಸಹಕಾರಿ ಪತ್ತು ನಿರ್ವಹಣೆ ವಿಷಯದ ಕುರಿತು, ಮೂರನೇಯ ಅವಧಿಗೆ ಶ್ರೀ ಆರ್. ಎಸ್. ಪ್ರಕಾಶ ಬ್ಯಾಂಕಿಂಗ್ ಮೂಲ ಮಾಹಿತಿ ವಿಷಯದ ಕುರಿತು ಮತ್ತು ನಾಲ್ಕನೇಯ ಅವಧಿಗೆ ಶ್ರೀ ಶಿವಾನಂದ ಕುಲಕರ್ಣಿ ಇವರು ಮಾಹಿತಿ ತಂತ್ರಜ್ಞಾನದ ವಿಷಯದ ಕುರಿತು ನಡೆಸಿಕೊಟ್ಟರು. ತರಗತಿಯಲ್ಲಿ 55 ಅಭ್ಯರ್ಥಿಗಳು ಹಾಜರಿದ್ದರು.

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇದರ ವತಿಯಿಂದ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ಡಿ.ಸಿ.ಬಿ.ಎಮ್) ಕೋರ್ಸ್‌ನ ಬೆಂಗಳೂರು ಕೇಂದ್ರದ 2ನೇ ಸಂಪರ್ಕ ವರ್ಗವನ್ನು ದಿನಾಂಕ 09-4-2022 ಮತ್ತು 10-04-2022 ರಂದು ಸೌಹಾರ್ದ ಸಹಕಾರಿ ಸೌಧ, ನಂ68, 17&18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055 ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಎರಡು ದಿನಗಳ ಕಾಲ ಡಿಸಿಬಿಎಮ್ ಕೋರ್ಸ್‌ನ ಸಂಪರ್ಕ ವರ್ಗದ ತರಗತಿಗಳು ಜರುಗಿದವು. ದಿನಾಂಕ 09.04.2022 ರಂದು ಸದರಿ ಕಾರ್ಯಕ್ರಮದ ವೇದಿಕೆಗೆ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ್ ಕವಟಗಿಮಠ, ನಿರ್ದೇಶಕರುಗಳಾದ ಶ್ರೀ ಗುರಾನಾಥ್ ಜ್ಯಾಂತೀಕರ, ಶ್ರೀ ವೈ.ಟಿ ಪಾಟೀಲ, ಸಂಜೀವ್ ಮಹಜನ, ಬೀದರ್ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಎಸ್ ಎಸ್ ಪಾಟೀಲ್ ಆಗಮಿಸಿ ಅಭ್ಯರ್ಥಿಗಳಿಗೆ ಹಿತನುಡಿಗಳನ್ನು ಹೇಳಿ ಶುಭ ಹಾರೈಸಿದರು. ದಿನಾಂಕ 09-4-2022 ರಂದು ಡಿ.ಸಿ.ಬಿ.ಎಂ ಕೋರ್ಸ್‌ನ ಮೊದಲ ಅವಧಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಡಿಸಿಬಿಎಂ ಕೋರ್ಸ್‌ನ ಸಂಪರ್ಕ ವರ್ಗದ ಎರಡನೇ ಅವಧಿ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಕುರಿತಾಗಿ ಮತ್ತು ಮೂರನೇ ಅವಧಿ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಡಾ.ಎಸ್.ಎ ಸಿದ್ದಾಂತಿರವರು ಉಪನ್ಯಾಸ ನೀಡಿದರು. ನಾಲ್ಕನೇ ಅವಧಿಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶಶಿಧರ ಎಲೆ ರವರು ಸಹಕಾರಿ ಪತ್ತು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ನಾಲ್ಕನೇ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ಅಭ್ಯರ್ಥಿಗಳ ಕುರಿತು ಯಶಸ್ವಿ ಸಹಕಾರಿಗಳನ್ನು ಕಟ್ಟುವಲ್ಲಿ ಸಿಬ್ಬಂದಿಗಳ ಪಾತ್ರದ ಬಗ್ಗೆ ಸುವಿಸ್ತಾರವಾಗಿ ಮಾರ್ಗದರ್ಶನ ನೀಡಿದರು. ಡಿಸಿಬಿಎಂ ಕೋರ್ಸ್‌ನ ಸಂಪರ್ಕ ವರ್ಗದ ಎರಡನೇ ದಿನವಾದ ದಿನಾಂಕ 10-4-2022 ರಂದು ಮೊದಲನೇ ಮತ್ತು ಎರಡನೇ ತರಗತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರವೀಂದ್ರ ಜಿ ಎಸ್ ರವರು ಮಾಹಿತಿ ತಂತ್ರಜ್ಞಾನ ಮತ್ತು ಬ್ಯಾಂಕಿಂಗ್ ಮೂಲ ಮಾಹಿತಿ ಕುರಿತಾಗಿ ಉಪನ್ಯಾಸವನ್ನು ನೀಡಿದರು. ದಿನದ ಮೂರನೇ ಮತ್ತು ನಾಲ್ಕನೇ ಅವಧಿಯನ್ನು ಶ್ರೀ ನಾರಾಯಣ ಹೆಗಡೆ, ಉಪ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ಸಹಕಾರ ಕಾಯ್ದೆಗಳು ಮತ್ತು ಬ್ಯಾಂಕಿಂಗ್ ಕಾಯ್ದೆಗಳ ಕುರಿತು ಉಪನ್ಯಾಸ ನೀಡಿದರು. ತರಗತಿಗಳು ಮುಗಿದ ನಂತರ ಸಂಯುಕ್ತ ಸಹಕಾ-ರಿಯ ತರಬೇತುದಾರರಾದ ಶ್ರೀ ವಿಜೆ ಕಾರಕೂನ್ ರವರ ಉಪಸ್ಥಿತಿಯಲ್ಲಿ ಎರಡು ದಿನದ ತರಗತಿಗಳ ಬಗ್ಗೆ ಚರ್ಚಿಸಲಾಯಿತು. ನಂತರ ಕಾರ್ಯಕ್ರಮದ ನಿರ್ವಾಹಕರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ರವರು ಅಧ್ಯಯನ ವರದಿಗಳನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ 34 ವರದಿಗಳನ್ನು ಸಂಗ್ರಹಿಸಲಾಯಿತು. ಬೆಂಗಳೂರು ನಗರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಮಂಡ್ಯ ಜಿಲ್ಲೆ, ತುಮಕೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಸಹಕಾರಿಗಳ ಸಿಬ್ಬಂದಿಗಳು ಹಾಗೂ 12 ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಸೇರಿದಂತೆ 21 ಸಹಕಾರಿ ಸಂಸ್ಥೆಗಳಿಂದ ದಿನಾಂಕ 09.04.2022 ರಂದು 54 ಪ್ರತಿನಿಧಿಗಳು ಭಾಗವಹಿಸಿದ್ದು, 4 ಸಿಬ್ಬಂದಿಗಳು ಗೈರಾಗಿದ್ದರು.

ದಿನಾಂಕ 10.04.2022 ರಂದು 46 ಪ್ರತಿನಿಧಿಗಳು ಭಾಗವಹಿಸಿದ್ದು ಒಟ್ಟೂ 12 ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ.

**ಶಿವಮೊಗ್ಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ಡಿ.ಸಿ.ಬಿ.ಎಂ) ಕೋರ್ಸ್‌ನ ಶಿವಮೊಗ್ಗ ಕೇಂದ್ರದ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 09.04.2022 ರಂದು ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶಿವಮೊಗ್ಗ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ದಿನಾಂಕ 09.04.2022 ಮತ್ತು 10.04.2022 ರಂದು ಎರಡು ದಿನಗಳ ಕಾಲ ಡಿಸಿಬಿಎಂ ಕೋರ್ಸ್‌ನ ಸಂಪರ್ಕ ವರ್ಗದ ತರಗತಿಗಳು ನಡೆದವು. ಡಿಸಿಬಿಎಂ ಕೋರ್ಸ್‌ನ ಎರಡನೆಯ ಸಂಪರ್ಕ ವರ್ಗದ ಮೊದಲನೇ ದಿನವಾದ ದಿನಾಂಕ 09.04.2022 ರಂದು ಮೊದಲನೇ ತರಗತಿಯನ್ನು ವಿಷಯ 05 ಲೆಕ್ಕ ಪರಿಶೋಧನೆ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸ್ವಾನಂದ ಹೆಗಡೆ ತೆಗೆದುಕೊಂಡರು. ಎರಡನೇ ಅವಧಿಯನ್ನು ವಿಷಯ 03 ಬ್ಯಾಂಕಿಂಗ್ ಮೂಲ ಮಾಹಿತಿ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳು ಶ್ರೀ ರುದ್ರಾಚಾರ್‌ರವರು ತೆಗೆದುಕೊಂಡರು. ಊಟದ ನಂತರ ಮೂರನೇ ಅವಧಿಯನ್ನು ವಿಷಯ 04 ರ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರುದ್ರಾಚಾರ್‌ರವರು ತೆಗೆದುಕೊಂಡರು. ನಾಲ್ಕನೇ ಅವಧಿಯಲ್ಲಿ ವಿಷಯ 06 ಮಾಹಿತಿ ತಂತ್ರಜ್ಞಾನ ರ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುಭಾಷ್ ಹೆಗಡೆ ತೆಗೆದುಕೊಂಡರು. ಡಿಸಿಬಿಎಂ ಕೋರ್ಸ್‌ನ ಎರನೆಯ ಸಂಪರ್ಕ ವರ್ಗದ ಎರಡನೇ ದಿನವಾದ ದಿನಾಂಕ 10.04.2022 ರಂದು ಮೊದಲನೇ ತರಗತಿಯನ್ನು ವಿಷಯ 02 ಸಹಕಾರಿ ಪತ್ತು ನಿರ್ವಹಣೆ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಹೆಚ್ ಎಸ್ ಸತೀಶ್‌ರವರು ತೆಗೆದುಕೊಂಡರು. ಎರಡನೇ ಅವಧಿಯನ್ನು ವಿಷಯ 01 ರ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಹೆಚ್ ಎಸ್ ಸತೀಶ್‌ರವರು ತೆಗೆದುಕೊಂಡರು. ಊಟದ ನಂತರ ಮೂರನೇ ಅವಧಿಯನ್ನು ಈತ್ತೀಚಿನ ಸಂವಿಧಾನ ತಿದ್ದುಪಡಿಗಳ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀಕಾಂತ ಬರುವೆ ತೆಗೆದುಕೊಂಡರು.

ನಾಲ್ಕನೇ ಅವಧಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಇವರು ಎರಡು ದಿನದ ತರಗತಿಯ ಬಗ್ಗೆ ಚರ್ಚಿಸಲಾಯಿತು. ಮತ್ತು ಅಧ್ಯಯನ ವರದಿಯನ್ನು ತಯಾರಿಸುವ ಕುರಿತು ಮತ್ತು ಮಾದರಿಯ ಬಗ್ಗೆ ತಿಳಿಸಿಕೊಡಲಾಯಿತು. ಶಿವಮೊಗ್ಗ ಜಿಲ್ಲೆ, ದಾವಣಗೆರೆ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಹಾವೇರಿ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ನೋಂದಣಿಗೊಂಡ ಒಟ್ಟು 49 ಪ್ರತಿನಿಧಿಗಳಲ್ಲಿ 44 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಳ್ಳಾರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಪ್ರಾಂತೀಯ ಕಛೇರಿ ಕಲಬುರಗಿ ಬಳ್ಳಾರಿ ಜಿಲ್ಲಾ ಕೇಂದ್ರದಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜಮೆಂಟ್ ಡಿಪ್ಲೋಮಾ 4 ನೇ ತಂಡದ 2 ನೇ ಸಂಪರ್ಕ ವರ್ಗದ ತರಗತಿಯು ದಿನಾಂಕ 23.04.2022 ಮತ್ತು 24.04.2022 ಬಳ್ಳಾರಿ ಜಿಲ್ಲೆಯ ಪೋಲೀಸ್ ಜಿಮ್ಖಾನದ ತರಬೇತಿ ಕೇಂದ್ರದಲ್ಲಿ ಜರುಗಿರುತ್ತದೆ. ಸಂಪರ್ಕ ತರಗತಿಯಲ್ಲಿ 65 ಅಭ್ಯರ್ಥಿಗಳು ಭಾಗವಹಿಸಿದ್ದರು.

## ಚುನಾವಣಾ ಪೂರ್ವ ಸಿದ್ಧತಾ ಸಭೆ

ದಿನಾಂಕ 30.04.2022 ರಂದು ಶಿವಮೊಗ್ಗ, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆನ್‌ಲೈನ್ ಮೂಲಕ ಸಂಯುಕ್ತ ಸಹಕಾರಿಯ ಚುನಾವಣಾ ಪೂರ್ವ ಸಿದ್ಧತಾ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ್ ರವರು ವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಹಾಗೂ ಶ್ರೀ ಶಶಿಕುಮಾರ್ ರವರು ಸಹಕಾರಿಗಳಿಗೆ ಅಗತ್ಯ ಮಾಹಿತಿ ನೀಡಿದರು. ಸಭೆಯಲ್ಲಿ 115 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು

### ಸಹಕಾರಿಗಳ ನಿರ್ದೇಶಕರುಗಳ ಅನರ್ಹತೆ

**ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಶಿವಮೊಗ್ಗ ಸಹಕಾರಿಯ ಎರಡು ನಿರ್ದೇಶಕರ ಅನರ್ಹತೆ :**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(1)(ಸಿ)ರನ್ವಯ ಗೈರುಹಾಜರಿ ಬಗ್ಗೆ ಅನುಮತಿಯನ್ನು ಪಡೆಯದೆ ಮೂರು ನಿರಂತರ ಆಡಳಿತ ಮಂಡಲಿ ಸಭೆಗೆ ಗೈರುಹಾಜರಾಗಿರುವುದರಿಂದ ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಶಿವಮೊಗ್ಗ ಇದರ ನಿರ್ದೇಶಕರಾದ ಶ್ರೀಮತಿ ಗಿರಿಜಮ್ಮ ಹಾಗೂ ಶ್ರೀಮತಿ ಮಮತ ಇವರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(4) ರಡಿ ಕಾರಣ ಕೇಳಿ ನೋಟೀಸ್ ನೀಡಿಲಾಗಿತ್ತು, ಸದರಿ ಕಾರಣ ಕೇಳಿ ನೋಟೀಸ್‌ಗೆ ನಿರ್ದೇಶಕರಿಂದ ಯಾವುದೇ ಸ್ಪಷ್ಟೀಕರಣ ಸ್ವೀಕಾರದ ಹಿನ್ನಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(1)(ಸಿ)ರ ಪ್ರಾವಧಾನದಂತೆ ಹಾಗೂ ಸದರಿ ಅಧಿನಿಯಮದ ಕಲಂ 25(1)(ಎಫ್)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀಮತಿ ಮಮತ ಕೋಂ ನಾಗೇಶ್ ಇವರನ್ನು ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಶಿವಮೊಗ್ಗ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯತ್ವದಿಂದ ದಿನಾಂಕ 25.04.2022 ರಿಂದ ಮುಂದಿನ ಮೂರು ವರ್ಷಗಳಿಗೆ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹಗೊಳಿಸಲಾಗಿದೆ.

**ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಸಹಕಾರಿಯ ಒರ್ವ ನಿರ್ದೇಶಕರ ಅನರ್ಹತೆ :**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(1)(ಇ)ರನ್ವಯ ಸಾಲದ ನಿರಂತರ ಮೂರು ಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರರಾದ ಹಿನ್ನಲೆಯಲ್ಲಿ ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ನಿರ್ದೇಶಕರಾದ ಶ್ರೀ ಎಂ.ಚಂದ್ರಶೇಖರ್ ಮೂರ್ತಿ ತಂದೆ ಎಮ್.ಕೆ.ಮಾಯಾಣ್ಣ ಇವರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(4) ರಡಿ ಮೇಲ್ಕಂಡ ಉಲ್ಲೇಖ 01ರ ಮೂಲಕ ಕಾರಣ ಕೇಳಿ ನೋಟಿಸ್‌ನ್ನು ನೀಡಲಾಗಿತ್ತು. ಸದರಿ ಕಾರಣ ಕೇಳಿ ನೋಟಿಸಿಗೆ ನಿರ್ದೇಶಕರು ಸ್ಪಷ್ಟನೆಯನ್ನು ನೀಡಿದ್ದು ಸದರಿ ಸ್ಪಷ್ಟನೆಯು ಸಮಂಜಾಸವಾಗಿರದ ಹಿನ್ನಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(1)(ಇ)ರ ಪ್ರಾವದಾನದಂತೆ ಹಾಗೂ ಸದರಿ ಅಧಿನಿಯಮದ ಕಲಂ 25(1)(ಎಫ್)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ. ಚಂದ್ರಶೇಖರ್ ಮೂರ್ತಿ ತಂದೆ ಎಮ್.ಕೆ.ಮಾಯಾಣ್ಣ ಇವರನ್ನು ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಆಡಳಿತ ಮಂಡಲಿಯ ಸದಸ್ಯತ್ವದಿಂದ ದಿನಾಂಕ 03.03.2022 ರಿಂದ ಮುಂದಿನ ಒಂದು ವರ್ಷಕ್ಕೆ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹಗೊಳಿಸಲಾಗಿದೆ.

# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ ಬಸವ ಜಯಂತಿ ಆಚರಣೆ

ಬಸವ ಜಯಂತಿ ದಿನಾಚರಣೆಯ ಅಂಗವಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



ಕೇಂದ್ರ ಕಛೇರಿ



ಬೆಳಗಾವಿ ಪ್ರಾಂತೀಯ ಕಛೇರಿ



ಕಲಬುರಗಿ ಪ್ರಾಂತೀಯ ಕಛೇರಿ



ಮೈಸೂರು ಪ್ರಾಂತೀಯ ಕಛೇರಿ




ಬೀದರ ಜಿಲ್ಲಾ ಸಂಪರ್ಕದಲ್ಲಿ ಕಛೇರಿಯಲ್ಲಿ ಬಸವ ಜಯಂತಿ ಆಚರಣೆ.



ಶ್ರೀ ಬಸವೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯಲ್ಲಿ ಬಸವ ಜಯಂತಿ ಆಚರಣೆ.



**ಕಲಬುರಗಿ :** ಕಲಬುರಗಿ ಪ್ರಾಂತದ ನೂತನ ಕಟ್ಟಡದ ವಾಸ್ತು ಶಿಲ್ಪಿಗಳಾದ ಶ್ರೀ ಬಸವರಾಜ ಜೆ.ಖಂಡೇರಾವ ರವರಿಗೆ ಪ್ರಾಂತದ ನೂತನ ಕಟ್ಟಡದ ಪ್ರವೇಶ ಪೂಜಾ ಕಾರ್ಯಕ್ರಮದಲ್ಲಿ ಅನುಪಸ್ಥಿತಿವಿದ್ದ ಕಾರಣದಿಂದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಭೇಟಿ ಮಾಡಿ ಸನ್ಮಾನಿಸಿದರು.

# ಸಂಯುಕ್ತ ಸಹಕಾರಿಯ ಇದರ ಆಡಳಿತ ಮಂಡಳಿಯ ಚುನಾವಣೆಗಾಗಿ ಸಹಕಾರಿಯ ಡೆಲಿಗೇಟ್‌ನ್ನು ನಿರ್ಣಯಿಸುವ ಕುರಿತು ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರಿ ಸಂಸ್ಥೆ
"ಸೌಹಾರ್ದ ಸಹಕಾರಿ ಸೌಧ", ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ. 080-23378375-80,
ಇ-ಮೇಲ್ : Souharda@souharda.coop ವೆಬ್ ತಾಣ : www.Souharda.coop

ಪತ್ರ ಸಂಖ್ಯೆ:ಸಂಸ/ಆವಿ/ಚುನಾವಣೆ/ಸೌ-2/2022-23 | **ಚುನಾವಣಾ ತುರ್ತು** | ದಿನಾಂಕ:25.04.2022

ಇವರಿಗೆ :

ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ವಿಷಯ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿಯ ಚುನಾವಣೆಗಾಗಿ ಸಹಕಾರಿಯ ಡೆಲಿಗೇಟ್‌ನ್ನು ನಿರ್ಣಯಿಸುವ ಕುರಿತು.

ಉಲ್ಲೇಖ : 1. ದಿನಾಂಕ:07.10.2021ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021

2. ಮಾನ್ಯ ಪ್ರಾದೇಶಿಕ ಆಯುಕ್ತರು ಹಾಗೂ ಅಪೆಕ್ಸ್ ಸಹಕಾರ ಸಂಸ್ಥೆಗಳ ಚುನಾವಣಾಧಿಕಾರಿಗಳ ಪತ್ರ ಸಂಖ್ಯೆ: ಚುನಾವಣೆವಿವ162021-22, ದಿನಾಂಕ:19.03.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಯು 2017-18ನೇ ಸಾಲಿನಲ್ಲಿ ನಡೆದಿದ್ದು ದಿನಾಂಕ:28.07.2017 ರಂದು ಚುನಾವಣಾ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಪ್ರಸ್ತುತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅವಧಿಯು ದಿನಾಂಕ:27.07.2022 ರಂದು ಮುಕ್ತಾಯಗೊಳ್ಳಲಿದ್ದು, ಸದರಿ ದಿನಾಂಕದೊಳಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣಾ ಪ್ರಕ್ರಿಯೆ ನಡೆದು ನೂತನ ಆಡಳಿತ ಮಂಡಳಿಯ ಆಯ್ಕೆಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಚುನಾವಣೆಗೆ ಸಂಬಂಧಿಸಿದ ಪ್ರಕ್ರಿಯೆಗಳು ಆರಂಭಗೊಂಡಿರುತ್ತವೆ.

ಈ ಪತ್ರದೊಂದಿಗೆ ಡೆಲಿಗೇಟ್ ನಮೂನೆಗಳನ್ನು ಮತ್ತು ಗುರುತಿನ ಚೀಟಿಯ ನಮೂನೆಗಳನ್ನು ಲಗತ್ತಿಸಿದೆ. ಡೆಲಿಗೇಟ್ ನಮೂನೆ/ಗುರುತಿನ ಚೀಟಿಯನ್ನು ಭರ್ತಿ ಮಾಡಲು ಈ ಕೆಳಗಿನ ಸೂಚನೆಗಳನ್ನು ಪಾಲಿಸಲು ಕೋರಿದೆ.

**ಡೆಲಿಗೇಟ್ ನಮೂನೆ ಭರ್ತಿ ಮಾಡಲು ಸೂಚನೆಗಳು**

1. ಡೆಲಿಗೇಟ್ ನಮೂನೆಯ ನಾಲ್ಕು(4) ಪ್ರತಿಗಳು ಮತ್ತು ಗುರುತಿನ ಚೀಟಿಯ ಎರಡು(2) ಪ್ರತಿಗಳು ಇವೆ. ಎಲ್ಲಾ ಪ್ರತಿಗಳನ್ನು ಪೂರ್ಣವಾಗಿ ಭರ್ತಿ ಮಾಡತಕ್ಕದ್ದು.
2. ಡೆಲಿಗೇಟ್ ನಮೂನೆಯ ಮೊದಲ ಪ್ಯಾರಾದಲ್ಲಿ ತಮ್ಮ ಸಂಸ್ಥೆಯ ಹೆಸರನ್ನು ಬರೆಯಬೇಕು ಅಥವಾ ಹೆಸರಿನ ಸೀಲ್ ಹಾಕಬಹುದು
3. ಮೊದಲ ಪ್ಯಾರಾದಲ್ಲಿ ದಿನಾಂಕವನ್ನು ತುಂಬದೇ ಖಾಲಿ ಬಿಡಬೇಕು.
4. ಕ್ರಮ ಸಂಖ್ಯೆ 1 ರಲ್ಲಿ ತಮ್ಮ ಸಂಸ್ಥೆಯ ಡೆಲಿಗೇಟ್‌ನ ಇತ್ತೀಚಿನ ಪೋಟೋ ಅಂಟಿಸಬೇಕು. ಪೋಟೋದ ಮೇಲೆ ಡೆಲಿಗೇಟ್ ಸಹಿ ಮಾಡಬೇಕು. ಅರ್ಧ ಭಾಗ ಪೋಟೋದ ಮೇಲೆ ಬರುವಂತೆ ಸಹಕಾರಿಯ ಸೀಲ್ ಹಾಕಬೇಕು. ಮತ್ತು ಮುಖ್ಯಕಾರ್ಯನಿರ್ವಾಹಕರು ಸಹಿ ಮಾಡಬೇಕು.
5. ಕ್ರಮ ಸಂಖ್ಯೆ 2 ರಲ್ಲಿ ಡೆಲಿಗೇಟ್ ಹೆಸರನ್ನು, ತಂದೆ ಅಥವಾ ಗಂಡನ ಹೆಸರನ್ನು, ಡೆಲಿಗೇಟ್ ವಿಳಾಸವನ್ನು ಮತ್ತು ಸಹಕಾರಿಯ ಹೆಸರನ್ನು ಬರೆಯಬೇಕು.
6. ಕ್ರಮ ಸಂಖ್ಯೆ 3 ರಲ್ಲಿ ಸಹಕಾರಿಯ ಸೀಲ್ ಹಾಕಿ 'ಧೃಢೀಕರಿಸಿದೆ' ಎಂದು ಬರೆದು, ಮುಖ್ಯಕಾರ್ಯನಿರ್ವಾಹಕರು ಸಹಿ ಮಾಡಬೇಕು.

7. ಕ್ರಮ ಸಂಖ್ಯೆ 4 ರಲ್ಲಿ ತಮ್ಮ ಸಂಸ್ಥೆಯಲ್ಲಿ ಡೆಲಿಗೇಟ್ ಸದಸ್ಯತ್ವ ಪಡೆದ ದಿನಾಂಕ ಮತ್ತು ಸದಸ್ಯತ್ವ ಸಂಖ್ಯೆ ನಮೂದಿಸಬೇಕು.
8. ಕ್ರಮ ಸಂಖ್ಯೆ 5 ರಲ್ಲಿ ತಮ್ಮ ಸಂಸ್ಥೆಯ ಹೆಸರು, ಸೌಹಾರ್ದ ಕಾಯ್ದೆಯಡಿ ನೋಂದಣಿ ದಿನಾಂಕ ಮತ್ತು ಸಂಯುಕ್ತ ಸಹಕಾರಿಯಲ್ಲಿ ತಮ್ಮ ಸಂಸ್ಥೆಯ ಸದಸ್ಯತ್ವ ಸಂಖ್ಯೆ ನಮೂದಿಸಬೇಕು. (ಸಂಯುಕ್ತ ಸಹಕಾರಿಯಿಂದ ತಮಗೆ ಕಳುಹಿಸುವ ಎಲ್ಲಾ ಪತ್ರಗಳಲ್ಲಿ ಸದಸ್ಯತ್ವ ಸಂಖ್ಯೆ ನಮೂದಿಸಲಾಗುತ್ತಿದೆ. ತಮಗೆ ಕಳುಹಿಸಿದ ಕವರ್‌ನ ವಿಳಾಸದ ಮೇಲ್ಗಡೆ ಸದಸ್ಯತ್ವ ಸಂಖ್ಯೆ ಇರುತ್ತದೆ. ಉದಾ: ಬಿಜಿಯು-0001)
9. ಕ್ರಮ ಸಂಖ್ಯೆ 6 ರಲ್ಲಿ ಡೆಲಿಗೇಟ್ ಮಾದರಿ ಸಹಿಯನ್ನು 3 ಸಲ ಮಾಡಬೇಕು. ಸಹಿ ಮಾಡಲು ಬಾರದಿದ್ದಲ್ಲಿ ಹೆಬ್ಬೆಟ್ಟಿನ ಗುರುತನ್ನು 3 ಬಾರಿ ದಾಖಲಿಸಬೇಕು.
10. ಕ್ರಮ ಸಂಖ್ಯೆ 7 ರಲ್ಲಿ ಸಹಕಾರಿಯ ಸೀಲ್ ಹಾಕಿ 'ಧೃಡೀಕರಿಸಿದೆ' ಎಂದು ಬರೆದು, ಮುಖ್ಯಕಾರ್ಯನಿರ್ವಾಹಕರು ಸಹಿ ಮಾಡಬೇಕು.
11. ಕ್ರಮ ಸಂಖ್ಯೆ 8 ರಲ್ಲಿ ಡೆಲಿಗೇಟ್ ಆಯ್ಕೆಯ ಮಂಡಲಿ ಸಭೆಯ ದಿನಾಂಕ, ವಿಷಯ/ನಿರ್ಣಯ ಸಂಖ್ಯೆ ಬರೆಯಬೇಕು. ಪ್ರತಿ ಲಗತ್ತಿಸಿದೆ ಎನ್ನುವುದನ್ನು ಟಿಕ್ ಮಾಡಿ, ಲಗತ್ತಿಸಿಲ್ಲ ಎನ್ನುವುದರ ಮೇಲೆ ಅಡ್ಡಗೆರೆ ಹಾಕಬೇಕು.
12. ಧೃಢೀಕರಣದ ಕೆಳಗಡೆ ಸಹಕಾರಿಯ ಸೀಲ್ ಹಾಕಿ ಮುಖ್ಯಕಾರ್ಯನಿರ್ವಾಹಕರು ಸಹಿ ಮಾಡಬೇಕು.
13. ಪರಿಶೀಲನಾಧಿಕಾರಿಗಳ ಹುದ್ದೆ, ಪದನಾಮ, ದಿನಾಂಕ ಮತ್ತು ಸ್ಥಳವನ್ನು ಭರ್ತಿ ಮಾಡದೆ, ಹಾಗೆಯೇ ಖಾಲಿ ಬಿಡಬೇಕು.

**ಗುರುತಿನ ಚೀಟಿ ಭರ್ತಿ ಮಾಡಲು ಸೂಚನೆಗಳು**

1. ಕ್ರಮ ಸಂಖ್ಯೆ 1 ರಲ್ಲಿ ತಮ್ಮ ಸಂಸ್ಥೆಯ ಹೆಸರು ಮತ್ತು ವಿಳಾಸವನ್ನು ಬರೆಯಬೇಕು ಅಥವಾ ಹೆಸರು ಮತ್ತು ವಿಳಾಸವಿರುವ ಸೀಲ್ ಹಾಕಬಹುದು.
2. ಡೆಲಿಗೇಟ್‌ನ ಇತ್ತೀಚಿನ ಪೋಟೋ ಅಂಟಿಸಬೇಕು. ಪೋಟೋದ ಮೇಲೆ ಡೆಲಿಗೇಟ್ ಸಹಿ ಮಾಡಬೇಕು. ಅರ್ಧ ಭಾಗ ಪೋಟೋದ ಮೇಲೆ ಬರುವಂತೆ ಸಹಕಾರಿಯ ಸೀಲ್ ಹಾಕಬೇಕು. ಮತ್ತು ಮುಖ್ಯಕಾರ್ಯನಿರ್ವಾಹಕರು ಸಹಿ ಮಾಡಬೇಕು.
3. ಕ್ರಮ ಸಂಖ್ಯೆ 2 ರಲ್ಲಿ ಡೆಲಿಗೇಟ್ ಹೆಸರನ್ನು ಬರೆಯಬೇಕು.
4. ಕ್ರಮ ಸಂಖ್ಯೆ 3 ರಲ್ಲಿ ಸಂಯುಕ್ತ ಸಹಕಾರಿಯಲ್ಲಿ ತಮ್ಮ ಸಂಸ್ಥೆಯ ಸದಸ್ಯತ್ವ ಸಂಖ್ಯೆ ನಮೂದಿಸಬೇಕು.
5. ಕ್ರಮ ಸಂಖ್ಯೆ 4 ರಲ್ಲಿ ಡೆಲಿಗೇಟ್‌ನ ಲಿಂಗ (ಗಂಡು/ಹೆಣ್ಣು) ಮತ್ತು ವಯಸ್ಸನ್ನು ನಮೂದಿಸಬೇಕು.
6. ಕ್ರಮ ಸಂಖ್ಯೆ 5ರಲ್ಲಿ ಡೆಲಿಗೇಟ್ ವಾಸಸ್ಥಳದ ಪೂರ್ಣ ವಿಳಾಸ ಬರೆಯಬೇಕು.
7. ಡೆಲಿಗೇಟ್ ಸಹಿ ಮಾಡಬೇಕು ಅಥವಾ ಹೆಬ್ಬೆಟ್ಟಿನ ಗುರುತನ್ನು ದಾಖಲಿಸಬೇಕು.
8. ಕೆಳಗಡೆ ಸಹಕಾರಿಯ ಸೀಲ್ ಹಾಕಿ ಮುಖ್ಯಕಾರ್ಯನಿರ್ವಾಹಕರು ಸಹಿ ಮಾಡಬೇಕು.

ನಮೂನೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದೇ ಸಂಶಯ ಉಂಟಾದಲ್ಲಿ ತಮ್ಮ ಜಿಲ್ಲೆಯ ಜಿಲ್ಲಾ ಸಂಯೋಜಕರನ್ನು ಸಂಪರ್ಕಿಸಲು ಕೋರಿದೆ. ತಮ್ಮ ಜಿಲ್ಲೆಯ ಉಪನಿಬಂಧಕರಿಂದ ಧೃಢೀಕರಿಸಿದ ಆಡಳಿತ ಮಂಡಲಿ ನಿರ್ಣಯದ ಪ್ರತಿಯನ್ನು, ಸಂಪೂರ್ಣವಾಗಿ ಭರ್ತಿ ಮಾಡಿದ ಎಲ್ಲಾ ಆರು ನಮೂನೆಗಳೊಂದಿಗೆ ಲಗತ್ತಿಸಿ ತಮ್ಮ ಜಿಲ್ಲೆಯ ಜಿಲ್ಲಾ ಸಂಯೋಜಕರಿಗೆ ತಕ್ಷಣದಲ್ಲಿ ನೀಡಲು ಈ ಮೂಲಕ ತಿಳಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ /-
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# ಸಂಯುಕ್ತ ಸಹಕಾರಿಯ ಇದರ ಆಡಳಿತ ಮಂಡಳಿಯ ಚುನಾವಣೆಗಾಗಿ ಸಹಕಾರಿಯ ಡೆಲಿಗೇಟ್‌ನ್ನು ನಿರ್ಣಯಿಸುವ ಕುರಿತು ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರಿ ಸಂಸ್ಥೆ
"ಸೌಹಾರ್ದ ಸಹಕಾರಿ ಸೌಧ", ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560055. ದೂ. 080-23378375-80,
ಇ-ಮೇಲ್ : Souharda@souharda.coop ವೆಬ್ ತಾಣ : www.Souharda.coop

**ಚುನಾವಣಾ ತುರ್ತು**

ಪತ್ರ ಸಂಖ್ಯೆ:ಸಂಸ/ಆವಿ/ಚುನಾವಣೆ/ಸೌ-1/2022-23 ದಿನಾಂಕ:25.04.2022

ಇವರಿಗೆ :
ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ವಿಷಯ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿಯ ಚುನಾವಣೆಗಾಗಿ ಸಹಕಾರಿಯ ಡೆಲಿಗೇಟ್‌ನ್ನು ನಿರ್ಣಯಿಸುವ ಕುರಿತು.

ಉಲ್ಲೇಖ : 1. ದಿನಾಂಕ:07.10.2021ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021

2. ಮಾನ್ಯ ಪ್ರಾದೇಶಿಕ ಆಯುಕ್ತರು ಹಾಗೂ ಅಪೆಕ್ಸ್ ಸಹಕಾರ ಸಂಸ್ಥೆಗಳ ಚುನಾವಣಾಧಿಕಾರಿಗಳ ಪತ್ರ ಸಂಖ್ಯೆ: ಚುನಾವಣೆವಿವ162021-22, ದಿನಾಂಕ:19.03.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಯು 2017-18ನೇ ಸಾಲಿನಲ್ಲಿ ನಡೆದಿದ್ದು ದಿನಾಂಕ:28.07.2017 ರಂದು ಚುನಾವಣಾ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಪ್ರಸ್ತುತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅವಧಿಯು ದಿನಾಂಕ:27.07.2022 ರಂದು ಮುಕ್ತಾಯಗೊಳ್ಳಲಿದ್ದು, ಸದರಿ ದಿನಾಂಕದೊಳಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣಾ ಪ್ರಕ್ರಿಯೆ ನಡೆದು ನೂತನ ಆಡಳಿತ ಮಂಡಳಿಯ ಆಯ್ಕೆಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಚುನಾವಣೆಗೆ ಸಂಬಂಧಿಸಿದ ಪ್ರಕ್ರಿಯೆಗಳು ಆರಂಭಗೊಂಡಿರುತ್ತವೆ.

ಉಲ್ಲೇಖ 01ರಂತೆ ದಿನಾಂಕ:07.10.2021ರಿಂದ ಜಾರಿಗೆ ಬಂದಿರುವ ಸೌಹಾರ್ದ ಸಹಕಾರಿ ಅಧಿನಿಯಮ ತಿದ್ದುಪಡಿಯನ್ವಯ ಕಲಂ.53(9) ರಂತೆ "ಸಂಯುಕ್ತ ಸಹಕಾರಿಯಲ್ಲಿ ಸದಸ್ಯ ಸಹಕಾರಿಯನ್ನು ಪ್ರತಿನಿಧಿಸಲು ಆಡಳಿತ ಮಂಡಳಿ ನಿರ್ಣಯದ ಮೂಲಕ ಸಹಕಾರಿ ಮಂಡಳಿಯು ಚುನಾಯಿತ ನಿರ್ದೇಶಕನನ್ನು ನಾಮನಿರ್ದೇಶನ ಮಾಡಬಹುದು. ಅಂಥ ನಾಮ ನಿರ್ದೇಶಿತ ನಿರ್ದೇಶಕನು ಸಂಯುಕ್ತ ಸಹಕಾರಿಯಲ್ಲಿ ಅಂಥ ನಿರ್ಣಯದೊಂದಿಗೆ ಸಹಕಾರಿಯನ್ನು ಪ್ರತಿನಿಧಿಸತಕ್ಕದ್ದು" ಎಂದಿರುತ್ತದೆ. ಉಲ್ಲೇಖ 02ರ ಪತ್ರದಲ್ಲಿ ಅಪೆಕ್ಸ್ ಸಹಕಾರ ಸಂಸ್ಥೆಗಳ ಚುನಾವಣಾಧಿಕಾರಿಗಳು ಆಯಾ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರುಗಳಿಂದ ಧೃಢೀಕರಿಸಲಾದ ಧೃಢೀಕೃತ ಸಭಾ ನಡವಳಿಯ ನಿರ್ಣಯವನ್ನು ಸಲ್ಲಿಕೆ ಮಾಡಲು ಸೂಚಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಆಧಾರದಲ್ಲಿ, ಸಂಯುಕ್ತ ಸಹಕಾರಿಯ ಚುನಾವಣೆಯಲ್ಲಿ ಸಹಕಾರಿಯ ಪರವಾಗಿ ಭಾಗವಹಿಸಲು, ಮತ ನೀಡಲು, ಚುನಾವಣಾ ಪ್ರಕ್ರಿಯೆಯಲ್ಲಿ ಸಹಕಾರಿಯನ್ನು ಪ್ರತಿನಿಧಿಸಲು ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಚುನಾಯಿತ ನಿರ್ದೇಶಕನನ್ನು ಈ ಉದ್ದೇಶಗಳಿಗಾಗಿ ನಾಮನಿರ್ದೇಶನ ಮಾಡಿ ನಿರ್ಣಯವನ್ನು ಕೈಗೊಂಡು, (ಮಾದರಿ ನಮೂನೆಯನ್ನು ಲಗತ್ತಿಸಿದೆ.) ಸದರಿ ಸಭಾ ನಡವಳಿಯ ನಿರ್ಣಯದ ಪ್ರತಿಯನ್ನು ತಮ್ಮ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರುಗಳಿಂದ ಧೃಢೀಕರಿಸಿಕೊಂಡು ತಮ್ಮ ತಮ್ಮ ಜಿಲ್ಲೆಯ ಜಿಲ್ಲಾ ಸಂಯೋಜಕರಿಗೆ ತಕ್ಷಣದಲ್ಲಿ ಕಳುಹಿಸಲು ಈ ಮೂಲಕ ತಿಳಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ /-
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

**ಮಾದರಿ ನಮೂನೆ:**

ದಿನಾಂಕ: / /2022 ರಂದು ಶ್ರೀ/ಶ್ರೀಮತಿ ________________________

_____________ ರವರ ಅಧ್ಯಕ್ಷತೆಯಲ್ಲಿ ನಡೆದ ಸಹಕಾರಿಯ ಆಡಳಿತ ಮಂಡಲಿ ಸಭೆಯ ನಡವಳಿ.

**ಹಾಜರಿ:** **ಗೈರುಹಾಜರಿ:**

| ವಿಷಯ | ತೀರ್ಮಾನ |
|---|---|
| ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿಗೆ ನಡೆಯುವ ಚುನಾವಣೆಯಲ್ಲಿ ಸಹಕಾರಿ ಪರವಾಗಿ ಡೆಲಿಗೇಟ್ ಆಯ್ಕೆ ಮಾಡುವ ಕುರಿತು. | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮುಂದಿನ 5 (ಐದು) ವರ್ಷಗಳ ಅವಧಿಗೆ ನಡೆಯುವ ನಿರ್ದೇಶಕರ ಸ್ಥಾನಗಳ ಸಾಮಾನ್ಯ ಚುನಾವಣೆಯಲ್ಲಿ ಸಹಕಾರಿ ಪರವಾಗಿ ಡೆಲಿಗೇಟ್ ಆಗಿ ಸೂಚಕರಾಗಲು, ಸ್ಪರ್ಧಿಸಲು, ನಾಮಪತ್ರ ನೀಡಲು, ನಾಮಪತ್ರ ಹಿಂತೆಗೆದುಕೊಳ್ಳಲು, ಮತ ಚಲಾಯಿಸಲು ಸಹಕಾರಿಯ ಆಡಳಿತ ಮಂಡಲಿಯ ಅಧ್ಯಕ್ಷ/ಉಪಾಧ್ಯಕ್ಷ/ನಿರ್ದೇಶಕರಾಗಿರುವ ಶ್ರೀ/ಶ್ರೀಮತಿ ____________________ ಇವರನ್ನು ಆಯ್ಕೆ ಮಾಡಲಾಯಿತು ಎಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಸಹಿ /–
**ಮುಖ್ಯಕಾರ್ಯನಿರ್ವಾಹಕರು**

ಸಹಿ /–
**ಅಧ್ಯಕ್ಷರು**

**"ಅಸಲಿಗೆ ತಕ್ಕ ನಕಲು"**

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಸಹಿ ಹಾಗೂ ಮೊಹರು

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಾರ್ಷಿಕ ಕ್ರಿಯಾಯೋಜನಾ ಸಭೆ ಹಾಗೂ ಸಹಕಾರಿ ರತ್ನ ಸವಣೂರು ಸೀತಾರಾಮ ರೈಗಳಿಗೆ ಅಭಿನಂದನಾ ಕಾರ್ಯಕ್ರಮ.




**ಪುತ್ತೂರು :** ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ ರಾಜ್ಯಾದ್ಯಂತ 17 ಶಾಖೆಗಳೊಂದಿಗೆ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಕಳೆದ ಆರ್ಥಿಕ ವರ್ಷದ ಅವಲೋಕನ ಹಾಗೂ ಮುಂದಿನ ಆರ್ಥಿಕ ವರ್ಷದ ಗುರಿ ನಿಗದಿಯ ಬಗ್ಗೆ ವಾರ್ಷಿಕ ಕ್ರೀಯಾ ಯೋಜನಾ ಸಭೆಯು ದಿನಾಂಕ 14-04-2022ನೇ ಗುರುವಾರ ತೆಂಕಿಲದ ಒಕ್ಕಲಿಗ ಗೌಡ ಸಮುದಾಯ ಭವನದ "ಚುಂಚಶ್ರೀ" ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಭೆಯನ್ನು ಆದರ್ಶ ವಿವಿದೊದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಸವಣೂರು ಸೀತಾರಾಮ ರೈಗಳು ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ಬಳಿಕ ತುಮಕೂರಿನ ಮಿತ್ರ ಕೌನ್ಸಿಲೆಂಗ್ ಸೆಂಟರ್ ನ ನಿರ್ದೇಶಕರಾದ ಶ್ರೀ ಸಿ ಸಿ ಪಾವಟೆ ಇವರು ಸಿಬ್ಬಂದಿಗಳಿಗೆ ತರಬೇತಿ ನೀಡಿದರು.

ನಂತರ 2021-22ರ ಆರ್ಥಿಕ ವರ್ಷದ ಅವಲೋಕನ ಹಾಗೂ ಅತ್ಯುತ್ತಮ ಸಾಧನೆಗೈದ ಸಹಕಾರಿಯ ದರ್ಬೆ, ಎಂ. ಎಸ್ ರಸ್ತೆ ಪುತ್ತೂರು, ಬೆಳ್ಳಾರೆ ಹಾಗೂ ವಿರಾಜ ಪೇಟೆ ಶಾಖೆಯ ಸಿಬ್ಬಂದಿಗಳಿಗೆ ಸಾಧಕ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಸಹಕಾರಿಯ ನಿರ್ದೇಶಕರುಗಳು ಮುಂದಿನ ಆರ್ಥಿಕ ವರ್ಷಕ್ಕೆ ವಿವಿಧ ಸಲಹೆಗಳನ್ನು ನೀಡಿದರು, ಸಹಕಾರಿಯ ಅಧ್ಯಕ್ಷರು ಮಾತನಾಡಿ ಕಳೆದ ಆರ್ಥಿಕ ವರ್ಷದ ಸಾಧನೆಗೆ ಸಹಕರಿಸಿದ ಎಲ್ಲರನ್ನು ಪ್ರಶಂಶಿಸಿ ಮುಂದಿನ ಆರ್ಥಿಕ ವರ್ಷದ ಗುರಿಯನ್ನು ಘೋಷಿಸಿದರು ಸಿಬ್ಬಂದಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವು ಜರುಗಿತು.

ಈ ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಉಮೇಶ್ ಪ್ರಭು, ನಿರ್ದೇಶಕರುಗಳಾದ ಶ್ರೀ ದೇವಿಪ್ರಸಾದ್ ಕೆ, ಶ್ರೀ ಹರೀಶ್ ಬೋರ್ಕರ್, ಶ್ರೀ ಹೇಮಂತ್ ಕುಮಾರ್ ಕೆ ಆರ್ , ಶ್ರೀ ರಮೇಶ್ಚಂದ್ರ ಎಂ, ಶ್ರೀ ರಾಜಗೋಪಾಲ ಬಿ, ಶ್ರೀಮತಿ ಸರಸ್ವತಿ ಎನ್, ಶ್ರೀಮತಿ ದೇವಕಿ ಕೆ, ವೃತ್ತಿಪರ ನಿರ್ದೇಶಕರುಗಳಾದ ಶ್ರೀ ವೇದವ್ಯಾಸ ಕೆ, ಶ್ರೀ ಬಿ ವಸಂತ ಶಂಕರ್, ಕಾರ್ಯಾನುಗುಣ ನಿರ್ದೇಶಕರಾದ ಶ್ರೀ ಶ್ರೀಕಾಂತ ರಾವ್ ವಿ ಡಿ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ನಾಯಕ್ ಎ ಹಾಗೂ ಸಹಕಾರಿಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಸಹಕಾರಿ ರತ್ನ ಸವಣೂರು ಸೀತಾರಾಮ ರೈಗಳಿಗೆ ಅಭಿನಂದನಾ ಕಾರ್ಯಕ್ರಮ :**

ಉದ್ಘಾಟಕರಾಗಿ ಆಗಮಿಸಿದ ಶ್ರೀ ಸವಣೂರು ಸೀತಾರಾಮ ರೈಗಳಿಗೆ ಸಹಕಾರಿ ಕ್ಷೇತ್ರದ ರಾಜ್ಯ ಮಟ್ಟದ ಅತ್ಯುನ್ನತ ಪ್ರಶಸ್ತಿಯಾದ ಸಹಕಾರಿ ರತ್ನ ಲಭಿಸಿದಕ್ಕೆ ಸಹಕಾರಿಯ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ಎಲ್ಲಾ ಸದಸ್ಯರ ಪರವಾಗಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರು ಅಭಿನಂಧಿಸಿದರು.

## ಸನ್ಮಾನ

**ಹೊಸಪೇಟೆ :** ಪ್ರಗತಿ ಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ ಪ್ರಧಾನ ಶಾಖೆಗೆ ದಿನಾಂಕ 09/04/2022 ರಂದು ಶನಿವಾರ 1.00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಹಾಗೂ ಶ್ರೀ ರವಿಕುಮಾರ್ ಸಂಯೋಜನಾಧಿಕಾರಿ ಬಳ್ಳಾರಿ ವಿಭಾಗ ಇವರು ನಮ್ಮ ಶಾಖೆಗೆ ಭೇಟಿ ನೀಡಿ ನಮ್ಮ ಆಡಳಿತ ಮಂಡಳಿ ಯೊಂದಿಗೆ ಕುಶಲೋಪರಿ ಸಭೆ ನೆಡೆಸಿ ಸಹಕಾರಿ ಉತ್ತಮ ಬೆಳವಣಿಗೆ ಮತ್ತು 05 ವರ್ಷಗಳಲ್ಲಿ 03 ಶಾಖೆಗಳ ಪ್ರಾರಂಭದ ಬಗ್ಗೆ ಹರ್ಷ ವ್ಯಕ್ತಪಡಿಸಿದರು ಹಾಗೂ ಸಹಕಾರಿ ದಿನನಿತ್ಯದ ಚಟುವಟಿಗಳ ಬಗ್ಗೆ ಸಹಕಾರಿ ಆರ್ಥಿಕ ವ್ಯವಹಾರದ ಇತಿ-ಮಿತಿಗಳ, ಮತ್ತು ಸಾಲದ ಕುರಿತು ಮಾನದಂಡಗಳು, ನಿಧಿಗಳ ಸಂಗ್ರಹ ಮಿತಿ ಆರ್ಥಿಕ ಸಬಲತೆಗಳು ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದರು.

**ಧಾರವಾಡ :** ಸಿದ್ದಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಳ್ನಾವರ, ಮಿಲ್ಲತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಳ್ನಾವರ, ಅಳ್ನಾವರ ಪತ್ತಿನ ಸೌಹಾರ್ದ ಸಹಕಾರಿ ನಿ., ಅಳ್ನಾವರ, ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕ ಮಂಡಲಿ ಸದಸ್ಯರು ಹಾಗೂ ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



**ಮೈಸೂರು** : ಗುರುಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 2022 ರಿಂದ 2027 ಸಾಲಿನ ಆಡಳಿತ ಮಂಡಳಿ ಚುನಾವಣೆ ನಡೆದಿರುತ್ತದೆ. ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಎಚ್.ವಿ. ಅಶ್ವತನಾರಾಯಣ ಗುಪ್ತಾ, ಉಪಾಧ್ಯಕ್ಷರಾಗಿ ಎಸ್.ವಿ. ನಾಗೇಂದ್ರ ನಿರ್ದೇಶಕರುಗಳಾಗಿ ಶ್ರೀ ಎನ್. ಶ್ರೀರಾಮ್‌ಎಸ್. ಶ್ರೀ ವಿ. ಪಾಪಯ್ಯ, ಶ್ರೀ ಬಿ.ಜಿ. ಪ್ರಸಾದ್, ಶ್ರೀ. ಎನ್.ಪಿ. ರಂಜನ್, ಶ್ರೀ ಟಿ.ಎನ್. ರಮೇಶ್ ಶ್ರೀ ಬಿ ವೆಂಕಟೇಶ್, ಶ್ರೀಮತಿ ಎಚ್.ಎಸ್.ಭಾಗ್ಯ ಆಯ್ಕೆಯಾಗಿರುತ್ತಾರೆ.

## ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

### ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಚೆಳ್ಳಕೆರೆ.

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿಗಳು | 40.72 |
| ಒಟ್ಟು ನಿಧಿಗಳು | 19.05 |
| ಒಟ್ಟು ಸಾಲಗಳು | 43.51 |
| ಒಟ್ಟು ವ್ಯವಹಾರ | 83.78 |
| ಹೂಡಿಕೆಗಳು | 19.77 |
| ನಿವ್ವಳ ಲಾಭ | 3.61 |
| ಒಟ್ಟು ದುಡಿಯುವ ಬಂಡವಾಳ | 59.78 |
| ಒಟ್ಟು ಲಾಭ | 7.85 |
| Book value Rs.100/- per share | Rs1110/- (Rs.100/-) |
| Eps Rs. 100/- per share | 210.08 (Rs.100/-) |
| Percentage of profit to gross profit | 27.13% |
| Proposed share dividend | 25% |

### ವೇದಾ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು



ಶ್ರೀ ಪ್ರಹ್ಲಾದ ವೈ.ಕೆ
ಅಧ್ಯಕ್ಷರು



ಶ್ರೀ ಲೋಕೇಶ್ ಹೆಚ್.ಕೆ
ಉಪಾಧ್ಯಕ್ಷರು

## ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

### ಅಳ್ನಾವರ ಪತ್ತಿನ ಸೌಹಾರ್ದ ಸಹಕಾರಿ ನಿ., ಅಳ್ನಾವರ, ಧಾರವಾಡ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 1,24,40,200 |
| ನಿಧಿಗಳು ಹಾಗೂ ಇತರೆ ನಿಧಿಗಳು | 1,82,06,403.76 |
| ಒಟ್ಟು ನಿಧಿಗಳು | 3,06,46,603.76 |
| ಒಟ್ಟು ಠೇವಣಿಗಳು | 12,45,26,378.76 |
| ಸಾಲಗಳು ಮತ್ತು ಮುಂಗಡಗಳು | 12,34,46,151.42 |
| ಠೇವಣಿಯ ಮೇಲೆ ಪಾವತಿಸಬೇಕಾದ ಬಡ್ಡಿ | 40,47,440. |
| ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ | 1,10,01,117 |
| ದುಡಿಯುವ ಬಂಡವಾಳ | 16,65,36,892.02 |
| ಒಟ್ಟು ಆದಾಯ | 1,96,79,075.70 |
| ನಿವ್ವಳ ಲಾಭ | 61,54,097.50 |

### ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ |
|---|---|
| ಸದಸ್ಯರ ಸಂಖ್ಯೆ | 3723 |
| ಶೇರು ಬಂಡವಾಳ | 79,20,100.00 |
| ಗುಂತಾವಣಿಗಳು | 7,03,52,423.00 |
| ದುಡಿಯುವ ಬಂಡವಾಳ | 49,38,02,320.00 |
| ಠೇವಣಿಗಳು | 34,69,49,842.00 |
| ನಿಧಿಗಳು | 13,89,32,378.00 |
| ಸಾಲಗಳು | 42,29,90,113.00 |
| ಲಾಭ | 2,81,43,397.00 |

## ನವಭಾರತ ಸೌಹಾರ್ದ ಸಹಕಾರಿಯ ಸದಸ್ಯರ ಸಮಾವೇಶ



**ಉಡುಪಿ :** ನವಭಾರತ ಸೌಹಾರ್ದ ಸಹಕಾರಿ ನಿಯಮಿತ ಸಂಸ್ಥೆಯ ಸಮಾಜಮುಖಿ ಕಾರ್ಯ ಎಲ್ಲರೂ ಮೆಚ್ಚುವಂತದ್ದು. ಸಹಕಾರಿ ಸಂಸ್ಥೆಯ ಲಾಭ ಸಮಾಜಕ್ಕೂ ಸಿಗಲಿ, ಈ ಸಂಸ್ಥೆ ಮುಂದಿನ ದಿನಗಳಲ್ಲಿ ಅಭಿವೃದ್ಧಿಯನ್ನು ಕಾಣಲಿ ಎಂದು ಮಂದಾರ್ತಿ ದುರ್ಗಾಪರಮೇಶ್ವರೀ ದೇವಸ್ಥಾನದ ಪ್ರಧಾನ ಅರ್ಚಕರಾದ ಎಂ ಶ್ರೀಪತಿ ಅಡಿಗ ಹೇಳಿದರು. ಇವರು ಶೇಡಿಕೊಡ್ಲು ದುರ್ಗಾ ಸಭಾಂಗಣದಲ್ಲಿ ಭಾನುವಾರ ನಡೆದ ನವಭಾರತ್ ಸೌಹಾರ್ದ ಸಹಕಾರಿ ನಿಯಮಿತ ಇದರ ಸದಸ್ಯರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಮಂಜುನಾಥ್ ಎಸ್ ಕೆ ಮಾತನಾಡಿ ಒಂದು ಸಮುದಾಯ ಒಂದು ಪ್ರದೇಶದ ಅಭಿವೃದ್ಧಿ ಆಗಬೇಕಾದರೆ ಸಹಕಾರಿ ಸಂಘಗಳು ಗ್ರಾಮೀಣ ಭಾಗದಲ್ಲಿ ಹುಟ್ಟಬೇಕು. ಗ್ರಾಮೀಣ ಅಭಿವೃದ್ಧಿಯ ಚಿಂತನೆ ಗಮನದಲ್ಲಿಟ್ಟು ಹುಟ್ಟು ಹಾಕಿದ ನವಭಾರತ್ ಸೌಹಾರ್ದ ಸಹಕಾರಿ ನಿಯಮಿತ ಸಂಸ್ಥೆ ಮುಂದಿನ ದಿನಗಳಲ್ಲಿ ಯಶಸ್ಸಿನ ಹಾದಿ ಹಿಡಿಯುತ್ತದೆ. ಸದಸ್ಯರೆ ಸಹಕಾರಿಯ ಜೀವಾಳ. ಜನ ಸಾಮಾನ್ಯರಿಗೆ ಸಾಮಾಜಿಕ ಭದ್ರತೆ ನೆರವು ನೀಡುವ ಸಂಸ್ಥೆಯಾಗಿ ಬೆಳೆಯಲಿ ಎಂದರು.

ಮಂದಾರ್ತಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾದ ಎಚ್ ಗಂಗಾಧರ್ ಶೆಟ್ಟಿ ಮಾತನಾಡಿ ಸಂಘದ ಸಮಾಜಮುಖಿ ಸೇವೆ ಎಲ್ಲರಿಗೂ ಆದರ್ಶ, ಸಂಘದ ಮರು ಪಾವತಿ ಬಗ್ಗೆ ಗಮನ ವಹಿಸಿ ಆ ಮೂಲಕ ಸಂಸ್ಥೆಯು ಅಭಿವೃದ್ಧಿ ಕಾಣಲಿ ಎಂದರು. ಶಿರೂರು ಮಲ್ಲಿಕಾರ್ಜುನ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಕೃಷ್ಣ ನಾಯ್ಕ ಮಾತನಾಡಿ ಸಂಸ್ಥೆಯ ಸಮಾಜ ಮುಖಿ ಸೇವೆಯನ್ನು ಶ್ಲಾಘೀಸಿದರು.

ಛತ್ರಪತಿ ಶಿವಾಜಿ ವಿವಿದೋದ್ದೇಶ ಸಹಕಾರಿ ಸಂಘ ಉಡುಪಿ ಇದರ ಅಧ್ಯಕ್ಷರಾದ ದಿನೇಶ್ ನಾಯ್ಕ್ ಮಾತನಾಡಿ ಸಂಸ್ಥೆಯ ಬುನಾದಿ ಭದ್ರವಾಗಿದೆ ಸಾಮಾಜಿಕ ಸೇವೆ ಹೀಗೆ ಮುಂದುವರಿಯಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ನವಭಾರತ ಸೌಹಾರ್ದ ಸಹಕಾರಿ ನಿಯಮಿತ ಇದರ ಅಧ್ಯಕ್ಷರಾದ ಪ್ರಮೋದ್ ಕುಮಾರ್ ಶೆಟ್ಟಿ ಮಾತನಾಡಿ ಜನರೇ ನಮ್ಮ ಸಂಘದ ಶ್ರೇಯಸ್ಸಿನ ಹಿಂದಿನ ಶಕ್ತಿ. ನವ ಸಮಾಜಕ್ಕೆ ಚೈತನ್ಯ ತುಂಬಬೇಕು. ನಮ್ಮದು ರಾಷ್ಟ್ರದ ಚಿಂತನೆ. ಗ್ರಾಮ ವಿಕಾಸದ ಚಿಂತನೆ ಅದಕ್ಕಾಗಿ ನಮ್ಮ ಸಂಸ್ಥೆ ಯುವಕರಿಗೆ ಪ್ರೇರಣೆ ನೀಡಿ ಸರಿಯಾದ ಹಾದಿಯಲ್ಲಿ ಹೋಗಲು ಸಹಕಾರ ನೀಡುತ್ತದೆ. ಸಮಾಜದ ಹಿತವನ್ನು ಮಾಡುವುದೇ ನಮ್ಮ ಸಂಸ್ಥೆಯ ಉದ್ದೇಶ ಎಂದರು.

## ದಿವ್ಯಚೇತನ ಗ್ರಾಮೀಣ ಸೌಹಾರ್ದ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ



**ಮೈಸೂರು :** ದಿವ್ಯಚೇತನ ಗ್ರಾಮೀಣ ಸೌಹಾರ್ದ ಸಹಕಾರಿ ಸಂಘ ನಿ., ಇದರ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 01–05–2022ರಂದು ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಕೂಡನಹಳ್ಳಿ ಗ್ರಾಮ, ಬಸ್ ನಿಲ್ದಾಣದ ಹತ್ತಿರ, ವರುಣಾ ಹೋಬಳಿ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

ನೂತನ ಸಹಕಾರಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು, ಸಹಕಾರ ಸಂಘಗಳ ಲೆಕ್ಕಪರಿಶೋಧಕರಾದ ಶ್ರೀ ರವಿಪ್ರಸಾದ್‌ರವರು, ಸಹಕಾರಿಯ ಮುಖ್ಯಪ್ರವರ್ತಕರಾದ ಶ್ರೀ ಸುರೇಶ್ ಎಂ ರವರು, ಸಹಕಾರಿಯ ಪ್ರವರ್ತಕರು ಮತ್ತು ಸದಸ್ಯರು ಉಪಸ್ಥಿತರಿದ್ದರು.

ನಿಮ್ಮ ಪ್ರಶ್ನೆ



ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ.

– ಸಂಪಾದಕರು

**ಪ್ರಶ್ನೆ : ಶ್ರೀ ಜಗದೀಶ ಜೋಶಿ, ಹುಬ್ಬಳ್ಳಿ.**

**ಉತ್ತರ : ಶ್ರೀ ಸಿ.ಎನ್ ಪರಶಿವಮೂರ್ತಿ, ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು, ಮೈಸೂರು.**

**1) ಖಾತೆ ಪ್ರಾರಂಭಿಸುವ ಮುನ್ನ ಐ.ಡಿ. ಹಾಗೂ ವಿಳಾಸ ದಾಖಲೆ ಕಡ್ಡಾಯ, ಆಧಾರನಲ್ಲಿ, ಚುನಾವಣಾ ಕಾರ್ಡ್‌ನಲ್ಲಿ ಎರಡೂ ಇರುವುದು, ಹಾಗಾದರೇ ಪಾನ್ ಕಾರ್ಡ ಏಕೆ ಬೇಕು, ಪಾನ್ ಕಾರ್ಡ ಕಡ್ಡಾಯವೇ?**

**ಉತ್ತರ** : ಕೇಂದ್ರ ಸರ್ಕಾರ ಭಾರತ ಪ್ರತಿಯೊಂಬ ಪ್ರಜೆಯ ಬಗ್ಗೆ ಕನಿಷ್ಟ ವ್ಯಯಕ್ತಿಕ ಮತ್ತು ವ್ಯವಹಾರಿಕ ಮಾಹಿತಿಯನ್ನ ದೇಶದ ಆರ್ಥಿಕ ಸ್ಥಿತಿ ತಿಳಿಯಲು ಪಡೆಯುತ್ತಿದೆ. ಆದರೆ ಪ್ರತಿಯೊಂದು ಖಾತೆದಾರನು ತನ್ನ ಪಾನ್ ಸಂಖ್ಯೆ ಹಾಗೂ ಆಧಾರ್ ಸಂಖ್ಯೆ ಜೋಡಣೆ ಮಾಡಲು ನಿರ್ದೇಶಿಸಿದೆ. ಪ್ರತಿ ಸಂಸ್ಥೆಯ\ಬ್ಯಾಂಕಿನ ಆದಾಯ ತೆರಿಗೆ ಖಾತೆದಾರರ ಈ ಎರಡು ಕಾರ್ಡ್‌ಗಳು, ಅಂದರೆ ಆಧಾರ ಮತ್ತು ಪಾನ್, ಜೋಡಣೆ ಮಾಡುವ ಅವಧಿ ನಿಗಧಿ ಪಡಿಸಿದೆ. ಸರ್ಕಾರದಿಂದ ಕೊಡಮಾಡುವ ಎಲ್ಲಾ ಸೌಲಭ್ಯಗಳನ್ನು ಈ ಎರಡು ಖಾತೆಗಳನ್ನು ಜೋಡಣೆ ಮಾಡಿದ್ದರೆ ಮಾತ್ರ ಹಣವನ್ನು ವರ್ಗಾವಣೆ ಮಾಡುವ ನೀತಿ ಅನುಸರಿಸುತ್ತಿದೆ. ಆದ್ದರಿಂದ ಫಲಾನುಭವಿಗಳು, ಅಂದರೆ ಖಾತೆ ಹೊಂದಿದ ವ್ಯಕ್ತಿಗಳು, ಸಹಕಾರಿಯಿಂದ ಸೌಲಭ್ಯಗಳನ್ನು ಪಡೆಯಲು ಅಥವಾ ಸರ್ಕಾರದಿಂದ ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಈ ಎರಡು ಖಾತೆಗಳ ಹೊಂದಾಣಿಕೆ ಅತೀ ಅವಶ್ಯಕ. ಆದ್ದರಿಂದ ಆಧಾರ ಜೊಡಣೆ ಮಾಡಿದ್ದರೂ ಪಾನ್ ಕಾರ್ಡ್‌ಅನ್ನು ಜೊಡಣೆ ಮಾಡುವುದು ಅವಶ್ಯಕ.

**2) ಪಾನಕಾರ್ಡ ಇಲ್ಲದ ಸಮಯದಲ್ಲಿ ಫಾರ್ಮನಂ. 60/61 ಪಡೆಯಬೇಕಾ? ಸದರಿ ಸಹಕಾರಿ ಹಾಗೂ ಸಂಘ ಸಂಸ್ಥೆಗೆ ಸಂಬಂಧಿಸಿದೆಯಾ?**

**ಉತ್ತರ** : ಆರ್ಥಿಕ ವ್ಯವಹಾರ ಮಾಡಲು ಪ್ರತಿಯೊಬ್ಬ ವ್ಯಕ್ತಿಯು ಪಾನ್ ಕಾರ್ಡ್ ಅನ್ನು ಹೊಂದಿರಬೇಕು. ಅದು ಸಹಕಾರಿಯ ಜೊತೆ ವ್ಯವಹಾರ ಮಾಡುವ ವ್ಯಕ್ತಿಯು ಸಹ ಆಧಾರ್ ಮತ್ತು ಪಾನ್ ಸಂಖ್ಯೆಯನ್ನು ದಾಖಲಿಸುವ ವ್ಯವಸ್ಥೆ ಇರುಬೇಕು. ಇದರಿಂದ ಸಹಕಾರಿಯು ಮಾಡುವ ವ್ಯವಹಾರ ಪಾರದರ್ಶಕವಾಗಿರಬೇಕು. 60/61 ರ ಫಾರ್ಮ್ ಪಡೆಯದೇ ಇದ್ದರೂ ಪಾನ್ ಕಾರ್ಡ್ ಮಾತ್ರ ಇರಬೇಕು.

**3) ಸಹಕಾರಿಯ ಕಾರ್ಯವ್ಯಾಪ್ತಿ ಮೀರಿ ಸಾಲಗಾರ ಆಸ್ತಿ ಇದ್ದಲ್ಲಿ ಸದರಿ ಆಸ್ತಿಗಳ ಮೇಲೆ ಬೋಜಾ ಹಾಕಿ ಸಾಲ ನೀಡಬಹುದಾ?, ಭವಿಷ್ಯದಲ್ಲಿ ಸದರಿ ಆಸ್ತಿಯ ವಿಲೇವಾರಿಯಾಗದಾ ?**

**ಉತ್ತರ** : ಸಹಕಾರಿ ತನ್ನ ಕಾರ್ಯವ್ಯಾಪ್ತಿಯಲ್ಲಿ ಇರುವ ಆಸ್ತಿಯನ್ನು ಪಡೆದು ಸವಲತ್ತು ನೀಡುವುದು ನೀತಿ. ಕಾರ್ಯವ್ಯಾಪ್ತಿಯಿಂದ ಹೊರಗಿನ ಆಸ್ತಿಯ ಮೇಲೆ ಸಾಲ ನೀಡಿದರೇ ಸುಸ್ಥಿಯಾದಾಗ ನಂತರ ಸಾಲ ವಸೂಲಾತಿಗೆ ತೊಡಕಾಗುವ ಸಂಭವ ಇದೆ. ಏಕೆಂದರೆ ಸದಸ್ಯರು ಪಡೆದ ಸಾಲವು ಸುಸ್ಥಿಯಾಗದ ದಾವಾ ಪ್ರಕರಣವನ್ನು ದಾಖಲಿಸಿ ಜಾರಿ ಮಾಡುವ ಸಂದರ್ಭದಲ್ಲಿ, ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ಇರುವ ಮಾರಾಟಾಧಿಕಾ–ರಿಯ / ವಸೂಲಾಧಿಕಾರಿ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದನ್ನು ಜಾರಿಮಾಡಲು ಆ ಆಸ್ತಿಯಿರುವ ಜಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಮಾರಾಟಾಧಿಕಾರಿಯ / ವಸೂಲಾಧಿಕಾರಿ ಮೂಲಕ ಜಾರಿ ಮಾಡಬೇಕಾಗುತ್ತದೆ. 1959ರ ಕಾಯ್ದೆ ಅಧ್ಯಾಯ 11ಎ ಅಡಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಮಾತ್ರ ಕಾರ್ಯವ್ಯಾಪ್ತಿಯಿಂದ ಹೊರಗೆ ಸಾಲ ಸೌಲಭ್ಯಗಳನ್ನು ನೀಡಲು ಅವಕಾಶ ಕಲ್ಪಿಸಿದೆ. ಅಂದರೆ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಕಾರ್ಯವ್ಯಾಪ್ತಿ ಅನ್ವಯಿಸುವುದಿಲ್ಲ. ಯಾವುದೇ ಸಹಕಾರಿ ಕಾರ್ಯವ್ಯಾಪ್ತಿಯಿಂದ ಹೊರಗಿನ ವ್ಯಕ್ತಿಗಳಿಗೆ ಸಾಲನೀಡಿದಾಗ ಆ ಹಣವನ್ನು ವಸೂಲಿ ಮಾಡಲು ಅಧ್ಯಾಯ VII ರಲ್ಲಿ ದಾವಾ ದಾಖಲಿಸಿ ವಸೂಲಿ ಮಾಡಬಹುದು. ಆದರೆ ಆ ಸಾಲವನ್ನು ಕಾರ್ಯವ್ಯಾಪ್ತಿಯಿಂದ ಹೊರಗೆ ಮಂಜೂರಿ ಮಾಡಿದ ಆಡಳಿತ ಮಂಡಳಿಯ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರ ಸಂಯುಕ್ತ ಸಹಕಾ–ರಿಯ/ನಿಬಂಧಕರಿಗೆ ಇರುತ್ತದೆ'.

**4) ಠೇವುಗಳಿಗೆ ಎರಡು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ನಾಮೀನೇಶನ್ (ನಾಮನಿರ್ದೇಶನ) ಮಾಡಬಹುದಾ?**

**ಉತ್ತರ** : ಭಾರತೀಯ ರಿಸರ್ವ್ ಬ್ಯಾಂಕಿನ ನೀತಿಯಂತೆ ಒಂದು ಠೇವಣಿಗೆ ಒಂದೇ ನಾಮನಿರ್ದೇಶನ ಇರುಬೇಕೆಂದು ನೀತಿ ರೂಪಿಸಿರುವುದಿಂದ ಹೆಚ್ಚು ಸಂಖ್ಯೆಯ ವ್ಯಕ್ತಿಗಳನ್ನು ಸೇರಿಸಲು ಬರುವುದಿಲ್ಲ.

**5) ಸುಸ್ತಿಸಾಲದ ಬಾಕಿ ಮೇಲೆ ಕಾನೂನು ಕ್ರಿಯೆನಡೆಸಿ, ಸಾಲತುಂಬಲ್ಲದೇ ಪಕ್ಷದಲ್ಲಿ ಬೋಜಾ ಆಸ್ತಿಯು ಸಹಕಾರಿಯ/ಸಂಘದ ಹೆಸರಿನಲ್ಲಿ ವರ್ಗಾವಣೆಯಾದ ಮೇಲೆ, ಅಂತಹ ಆಸ್ತಿಯು ಕಾನುನಾತ್ಮಕವಾಗಿ ಖಾಯಂ ಸ್ವರೂಪದ ಸಹಕಾರಿಯ ಆಸ್ತಿಯಾಗಬಹುದೋ ಅಥವಾ ಮತ್ತೆ ಹರಾಜಿನ ಪ್ರಕ್ರಿಯೆ ನಡೆಸಬೇಕೋ?**

**ಉತ್ತರ** : ಸಹಕಾರಿಯ ನಿಯಮ 18ರ ಅನ್ವಯ ಮಾರಾಟವಾಗಲಾರದ ಆಸ್ತಿಯನ್ನು ಸಹಕಾರಿ ಹೆಸರಿಗೆ ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಿರುವುದರಿಂದ, ಸಹಕಾರಿ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಬಹುದು. ತನ್ನ ಹೆಸರಿಗೆ ಖಾತೆಯಾದ ನಂತರ ಆ ಆಸ್ತಿಯನ್ನು ಸಾರ್ವಜನಿಕವಾಗಿ ಮಾರಾಟ ಮಾಡಲು ಪೂರ್ಣ ಪ್ರಮಾಣ ಅಧಿಕಾರ ಸಹಕಾರಿಗೆ ವಿಹಿತವಾಗಿದೆ.

**6) ದುಡಿಯುವ ಬಂಡವಾಳ ಎಂದರೇನು? ಯಾವ ಖಾತೆಗಳು ಸೇರಿಸಬೇಕು ಹಾಗೂ ಕಡಿಮೆ ಮಾಡಬೇಕು.?**

**ಉತ್ತರ** : "ದುಡಿಯುವ ಬಂಡವಾಳ" ಅಂದರೆ ಸಹಕಾರಿಗೆ ಪಾವತಿಯಾದ ಶೇರು ಬಂಡವಾಳ, ಕಾಯ್ದಿಟ್ಟ ನಿಧಿ, ಇತರೆ ಬಂಡವಾಳಗಳು, ಠೇವಣಿಗಳು, ಸಾಲ ತೆಗೆದುಕೊಳ್ಳುವಿಕೆ, ಮತ್ತು ಕಟ್ಟಡಗಳಲ್ಲಿ ಹಾಗೂ ಇತರೆ ಸ್ಥಿರ ಸ್ವತ್ತುಗಳಲ್ಲಿ ತೊಡಗಿಸದೆ ಇರುವ ವಿಭಗಣೆಯಾಗದ ಲಾಭಗಳು. ಇದನ್ನ ಯಾವುದೇ ಖಾತೆಗೋ ಸೇರಿಸಬೇಕಿಲ್ಲ ಅಥವಾ ಕಡಿಮೆ ಮಾಡಬೇಕಿಲ್ಲ.

**7) ಚರ/ಸ್ಥಿರ ಆಸ್ತಿಗಳ ಮೇಲಿನ ಸವಕಳಿ ಆಯಾ ಆಸ್ತಿಗಳಲ್ಲಿ ಕಡಿಮೆ ಮಾಡಬೇಕೋ, ಅಥವಾ ಆಯಾ ಸವಕಳಿ ನಿಧಿಯಲ್ಲಿ ಸೇರಿಸಬೇಕೊ ?**

**ಉತ್ತರ** : ಚರ ಹಾಗೂ ಸ್ಥಿರ ಆಸ್ತಿಯ ಮೇಲೆ ಸವಕಳಿಯನ್ನು ತೆಗೆಯಲು ಭಾರತೀಯ ರಿಸರ್ವ್ ಬ್ಯಾಂಕ್, ಈ ಹಿಂದೆ ನೀತಿಯನ್ನು ರೂಪಿಸಿದೆ. ಆ ನೀತಿಯ ಪ್ರಕಾರ ಪ್ರತಿ ವರ್ಷ ಚರ ಮತ್ತು ಸ್ಥಿರ ಆಸ್ತಿಯ ಮೇಲೆ ನಿಗದಿ ಪಡಿಸಿದ ಪ್ರಮಾಣ ಮೇಲೆ ಸವಕಳಿ ನಿಧಿಯನ್ನು ಸೃಷ್ಟಿಸಬೇಕು. ಆ ನಿಧಿಯಲ್ಲಿ

ಸಂಗ್ರಹ ವಾಗುವ ಹಣ ಆ ಚರ ಮತ್ತು ಸ್ಥಿರ ಆಸ್ತಿಗೆ ಸಮಾನಾಂತರವಾಗಿ ಸಂಗ್ರಹವಾದ ಆ ಆಸ್ತಿಯ ಮೌಲ್ಯಕ್ಕೆ ಸವಕಳಿ ನಿಧಿಯನ್ನು ಹೊಂದಾಣಿಕೆ ಮಾಡತಕ್ಕದ್ದು. ಆದರೆ ಚರ ಮತ್ತು ಸ್ಥಿರ ಆಸ್ತಿಯ ಬೆಲೆಯನ್ನು ಕನಿಷ್ಟ ರೂ ಒಂದು ಎಂದು ತೋರಿಸಲೇಬೇಕು. ಏಕೆಂದರೆ ಆ ಚರ ಮತ್ತು ಸ್ಥಿರ ಆಸ್ತಿಗಳು ಸಹಕಾರಿಯ ಆರ್ಥಿಕ ತಃಖ್ತೆಗಳಲ್ಲಿ ಆಸ್ತಿಗಳಾಗಿ ದಾಖಾಲಿರಬೇಕು.

**8) ಸವಕಳಿಗಳು ಸಂಘ/ಸಹಕಾರಿಯ ಕಛೇರಿ ಸುತ್ತೋಲೆಯಂತೆ ಯಾ ಆದಾಯ ತೆರಿಗೆ ಕಾಯ್ದೆಯಂತೆ ಆಕರಣೆ ಮಾಡಬೇಕು?**

**ಉತ್ತರ :** ಸವಕಳಿ ನಿಧಿ ಪ್ರಮಾಣ ನಿಗಧಿಪಡಿಸುವಾಗ ಭಾರತೀಯ ರಿಸರ್ವ್ ಬ್ಯಾಂಕ್ ನವರು ಯಂತ್ರೋಪಕರಣಗಳಿಗೆ ಸಂಬಂಧಪಟ್ಟಂತೆ ವಾರ್ಷಿಕ ಶೇ.20 ರಂತೆ ಮತ್ತು ಕಟ್ಟಡಗಳ ಮೇಲೆ ವಾರ್ಷಿಕ ಶೇ. 10 ರಂತೆ ಸವಕಳಿಗೆ ಅವಕಾಶ ನೀಡಲು ಸೂತ್ರವನ್ನು ರೂಪಿಸಿದೆ. ಆದಾಯ ತೆರಿಗೆ ಕಾಯ್ದೆಯಲ್ಲಿ ವಿನಾಯಿತಿ ಕೇಳುವಾಗಲೂ ಈ ನೀತಿ ಅನ್ವಯವೇ, ಸಹಕಾರಿಯ ಲೆಕ್ಕ ಪತ್ರಗಳನ್ನು ಆದಾಯ ತೆರಿಗೆ ಇಲಾಖೆಗೆ ತಃಖ್ತೆ ಸಲ್ಲಿಸುವಾಗ, ವಿನಾಯಿತಿ ಕೇಳಲು ಬರುತ್ತದೆ.

**9) ಲೆಕ್ಕಪರಿಶೋಧನಾ ಸಂಭಾವನೆ ಸಂಧಾನ ಮೂಲಕ ಕೊಡಬೇಕೋ ಅಥವಾ ಕ.ರಾ.ಸ. ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರ ಕಛೇರಿಯ ಸುತ್ತೋಲೆ ದಿನಾಂಕ 16–03–2017ರ ಪ್ರಕಾರ ನಿರ್ದೇಶನಾಲಯದ ಮಾರ್ಗಸೂಚಿಯಂತೆ ಶುಲ್ಕ ಕೊಡಬೇಕೋ?**

**ಉತ್ತರ :** ಲೆಕ್ಕಪರಿಶೋಧನಾ ಇಲಾಖೆ ನಿಗಧಿ ಸಂಭಾವನೆಯನ್ನ ಗರಿಷ್ಟ ಮೊತ್ತವೆಂದು ಪರಿಗಣಿಸಿ ಸಹಕಾರಿಯು ಲೆಕ್ಕ ಪರಿಶೋಧಕರನ್ನ, ಮಹಾಸಭೆಯ ಒಪ್ಪಿಗೆಯ, ನಂತರ ನೇಮಕ ಮಾಡುವಾಗ ಲೆಕ್ಕ ಪರಿಶೋಧಕರ ಜೊತೆ ಸಂಧಾನ ನಡಿಸಿ ಕಡಿಮೆ ಮೊತ್ತಕ್ಕೆ ತೀರ್ಮಾನಮಾಡಬಹುದು. ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ನಿಗದಿ ಪಡಿಸಿದ ಮೊತ್ತವನ್ನು ಗರಿಷ್ಟ ವೆಂದು ಪರಿಗಣಿಸಿ ಸಂಧಾನ ಮೂಲಕ ಅಂತೀಮಗೊಳಿಸಿ.

**10) ಸೌಹಾರ್ದ ಸಹಕಾರಿಗಳು 2021 ರಿಂದ "ಸಂಘ" ಒಳಗೊಂಡಿರುವುದರಿಂದ ಸಹಕಾರಿಯು ವೃತ್ತಿ ತೆರಿಗೆ ತುಂಬುವ ಅವಶ್ಯ ಇದೆಯೇ?**

**ಉತ್ತರ :** ಆದಾಯ ತೆರಿಗೆ ಕಾಯ್ದೆಯಲ್ಲಿ, ಆದಾಯ ತೆರಿಗೆ ಕಾಯ್ದೆಯಿಂದ ಕಾಲಂ 80ಪಿ ಅಡಿ ವಿನಾಯಿತಿ ಕೇಳಿದಾಗ ಅದಕ್ಕೆ ಸಹಕಾರಿ ಸಂಘ ವೆಂಬ ಪದವಿದ್ದರೆ ಮಾತ್ರ ನೀಡಲಾಗುತ್ತಿತ್ತು. ಆದಾಯ ತೆರಿಗೆ ಇಲಾಖೆಯ ತಕರಾರಿನಿಂದ ಸೌಹಾರ್ದ ಕಾಯ್ದೆಯಲ್ಲಿ ಸಹಕಾರಿ ಎಂಬ ಪದದ ನಂತರ "ಸಂಘ" ವೆಂಬ ಪದವನ್ನ ಸೇರಿಸಲಾಗಿದೆ. ಅಂದರೆ ಸಂಬಂಧ ಪಟ್ಟ ಸಹಕಾರಿ ವಿನಾಯತಿ ಕೇಳುವಾಗ ಸಂಘ ಎಂದು ಹೆಸರಿಲ್ಲದಿದ್ದರೆ ಆದಾಯ ತೆರಿಗೆ ಇಲಾಖೆ ತಕರಾರು ತೆಗೆಯುವ ಸಂಭವ ಇರುವುದರಿಂದ ನೀವು ವಿನಾಯಿತಿ ಕೇಳುವಾಗ ಸೌಹಾರ್ದ ಸಹಕಾರಿ ಸಂಘವೆಂದು ಉಲ್ಲೇಖಿಸಿ.

**11) ಸೌಹಾರ್ದ ಸಹಕಾರಿಗಳು 2021 ರಿಂದ "ಸಂಘ" ಒಳಗೊಂಡಿರುವುದರಿಂದ ಸಂಘದ (1959) ಯಾ ಸೌಹಾರ್ದ ಕಾಯ್ದೆ ಜಾರಿಯಲ್ಲಿರುವುದು.**

**ಉತ್ತರ :** 1959ರ ಕಾಯ್ದೆಯಲ್ಲಿ ನೊಂದಾಯಿಸುವ ಸಹಕಾರಿಯು ಸಂಸ್ಥೆಯನ್ನು ಸಹಕಾರಿ ಸಂಘವೆಂದು ಉಲ್ಲೇಖಿಸಲಾಗಿದ್ದು ಸೌಹಾರ್ದ ಕಾಯ್ದೆಯಲ್ಲಿಯೂ ಈ ಸೌಹಾರ್ದ ಸಹಕಾರಿ ಸಂಘ ವೆಂದು ಉಪಯೋಗಿಸಿದ್ದರೂ ಎರಡೂ ಕಾಯ್ದೆಯಲ್ಲಿ ಯಾವುದೇ ತೊಡಗು ಬರುವುದಿಲ್ಲ. ಈ ಪದ ಸೇರ್ಪಡೆ ಆದಾಯ ತೆರಿಗೆ ಕಾಯ್ದೆಯ ವಿನಾಯಿತಿ ಪಡೆಯಲು ಮಾತ್ರ ತಿದ್ದುಪಡಿ ಮಾಡಲಾಗಿದೆ.

**12) ಲಾಭಾಂಶ ಸರಿಪಡಿಸುವ ನಿಧಿ ಮತ್ತು ಷೇರು ಸರಿಪಡಿಸುವ ನಿಧಿ ಯಾವ ಸಂದರ್ಭದಲ್ಲಿ ಬಳಸಬಹುದಾಗಿದೆ?**

**ಉತ್ತರ :** ಲಾಭಾಂಶ ಸರಿಪಡಿಸುವ ನಿಧಿ ಮತು ಷೇರು ಸರಿಪಡಿಸುವ ನಿಧಿ ಸೃಷ್ಠಿ ಮಾಡುವ ಉದ್ದೇಶ ಈ ಕೆಳಗಿನಂತೆ ಇದೆ. ಸಹಕಾರಿಯು ಸಾಮಾನ್ಯವಾಗಿ ಲಾಭಗಳಿಸಲೇ ಬೇಕು. ಯಾವುದಾದರೂ ಒಂದು ಅಥವಾ ಹೆಚ್ಚು ವರ್ಷಗಳಲ್ಲಿ ಲಾಭ ಬರುವುದಿಲ್ಲ ವೆಂಬ ಉದ್ದೇಶದಿಂದ, ಈ ನಿಧಿಯನ್ನು ವಾರ್ಷಿಕ ಲೆಕ್ಕಪತ್ರಗಳಿಂದ ಒಂದು ದೊಡ್ಡ ಪ್ರಮಾಣದ ನಿಧಿಯನ್ನ ಸೃಷ್ಟಿಸತಕ್ಕದ್ದು. ಸಹಕಾರಿಯು ಸದಸ್ಯರ ಹಿತಾಸತ್ತಿ ಕಾಪಡಲು ಯಾವುದಾದರೂ ವರ್ಷದಲ್ಲಿ ನಷ್ಟ ಬರುವ ಸಂಭವವಿದ್ದರೇ ಈ ನಿಧಿಯಲ್ಲಿ ಇರುವ ಹಣವನ್ನ ಹೊಂದಾಣಿಕೆ ಮಾಡಿ ಲಾಭವೆಂದು ತೊರಿಸಲು ಸೃಷ್ಟಿಸುವ ನಿಧಿ. ಆದರೆ ಈ ನಿಧಿಯ ಹಣವನ್ನ ಸಹಕಾರಿಯ ವ್ಯವಹಾರದಿಂದ ಹೊರಗಿಟ್ಟಿದರೆ ಮಾತ್ರ, ಅಂದರೆ ಜಿಲ್ಲಾ ಸಹಕಾರಿ ಸಂಘ, ರಾಷ್ಟೀಕೃತ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿದ್ದರೇ ಹೊಂದಾಣಿಕೆ ಮಾಡಿಕೊಳ್ಳಬಹುದು. ಷೇರು ಹಣಕ್ಕೆ ಸಂಬಂಧಪಟ್ಟಂತೆ ನಿಧಿಯನ್ನು ಸೃಷ್ಟಿಯ ಮಾಡುವ ಉದ್ದೇಶ ಯಾವುದಾದರೂ ವರ್ಷದಲ್ಲಿ ದೊಡ್ಡ ಪ್ರಮಾಣ ಸದಸ್ಯರು ತನ್ನ ಷೇರು ಹಣವನ್ನು ವಾಪಸ್ಸು ಪಡೆದಾಗ, ಆದ್ದರಿಂದ ಸಹಕಾರಿಯ ಸಾಲ ಎತ್ತುವ ಪ್ರಮಾಣ ಕಡಿತಗೊಳ್ಳುವುದನ್ನ ತಪ್ಪಿಸಲು ಹೊಂದಾಣೀಕೆ ಮಾಡಿಕೊಳ್ಳತಕ್ಕದ್ದು. ಅಂದರೆ ಒಂದು ಸಹಕಾರಿಯಲ್ಲಿ ಒಂದು ಕೋಟಿ ಶೇರು ಬಂಡವಾಳವಿದ್ದು ಆ ಸಹಕಾರಿ ಆ ಷೇರು ಹಣದ 20 ಪಟ್ಟು ಸಾಲ ಎತ್ತುವ ಅವಕಾಶವಿದ್ದಾಗ ದೊಡ್ಡ ಪ್ರಮಾಣದಲ್ಲಿ ಸುಮಾರು ಶೇ.50 ರಷ್ಟು ಸದಸ್ಯರು ಶೇರು ಹಣವನ್ನು ವಾಪಸ್ಸು ಪಡೆದಾಗ ಆ ಸಹಕಾರಿಯ ಸಾಲ ಎತ್ತುವ ಮಿತಿ ಕಡಿತ ಗೊಳ್ಳುತ್ತದೆ. ಅದನ್ನು ಸರಿಪಡಿಸಲು ಈ ಶೇರು ಸರಿಪಡಿಸುವ ನಿಧಿಯನ್ನು ಸೃಷ್ಟಿಮಾಡಿ ಶೇರು ಹಣ ರೂ. ಒಂದು ಕೋಟಿ ಇರುವಂತೇಯೇ ನೋಡಿಕೊಳ್ಳುವುದು ಇದರ ಉದ್ದೇಶ. ಕೆಲವು ಉಪವಿಧಿಗಳಲ್ಲಿ ಪ್ರತಿವರ್ಷ ಸದಸ್ಯರು ಷೇರು ಹಣವನ್ನು ವಾಪಸ್ಸು ಪಡೆಯಲು ಮಿತಿಯನ್ನು ನಿಗಧಿಪಡಿಸಿರುತ್ತದೆ ಅಂದರೆ ಸಹಕಾರಿಯ ಒಟ್ಟು ಷೇರಿನಲ್ಲಿ ಶೇ. 5 ಕ್ಕಿಂತ ಹೆಚ್ಚು ಷೇರನ್ನು ಸದಸ್ಯರಿಗೆ ವಾಪಸ್ಸು ಮಾಡತಕ್ಕದ್ದಲ್ಲ ಎದ್ದಿದ್ದಾಗ, ಅಷ್ಟು ತೊಂದರೆ ಯಾಗದಿದ್ದರೂ ಇಂತಹ ಪ್ರಸಂಗದಲ್ಲಿಯೂ ಈ ಷೇರು ಸರಿಪಡಿಸಲು ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಬಹುದು.

**13)ಪಿಗ್ಮೀ ಖಾತೆದಾರರು ಸಹಕಾರಿಯ/ಸಂಘದ, ಸಾಮಾನ್ಯ/ಸಹಸದಸ್ಯರು ಇರಲೇಬೇಕಾ?**

**ಉತ್ತರ :** ಕಾಯ್ದೆ ಕಲಂ 22ರ ಅನ್ವಯ ಸದಸ್ಯೇತರ ಜೊತೆ ವ್ಯವಹಾರವನ್ನು ನಿರ್ಬಂಧಿಸಿದೆ. ಆದ್ದರಿಂದ ಪಿಗ್ಮಿ ಖಾತೆ ದಾರು ಸದಸ್ಯರಾಗಿಲೇಬೇಕು. ಏಕೆಂದರೆ ಸದಸ್ಯೇತರರ ಜೊತೆ ವ್ಯವಹಾರ ಮಾಡುವುದನ್ನು ನಿರ್ಬಂಧಿಸಿದೆ. ಇದರ ಜೊತೆಗೆ ಭಾರತೀಯ ರಿಸರ್ವ ಬ್ಯಾಂಕ್, ಸದಸ್ಯರು ಯಾರು ಎಂಬುದನ್ನ ಮತದಾರರ ಹಕ್ಕುಳ್ಳ ಸದಸ್ಯ ಎಂದು ವಿರ್ಮಷಿಸಿದೆ. ಆದ್ದರಿಂದ ಸಹ ಮತ್ತು ನಾಮ ಮಾತ್ರ ಸದಸ್ಯರಿಗೂ ಈ ನೀತಿ ಅನ್ವಯಿಸುತ್ತದೆ.

**14)ಸಹಕಾರಿಯ/ಸಂಘದ ಖಾತೆ–ಕೀರ್ದಿಗಳನ್ನು ಕನ್ನಡದಲ್ಲಿಯೇ ಬರೆಯಬೇಕಾ ಅಥವಾ ಅನ್ಯಭಾಷೇಯಲ್ಲಿ ಬರೆಯಬಹುದೋ?**

**ಉತ್ತರ :** ಕನ್ನಡ ಕರ್ನಾಟಕ ರಾಜ್ಯದ ಆಡಳಿತ ಭಾಷೆ, ಕರ್ನಾಟಕ ಸರ್ಕಾರವು ಕನ್ನಡದಲ್ಲಿಯೇ ವ್ಯವಹಾರಿಸಬೇಕೆಂದು ಸೂಚಿಸಿದೆ. 1959ರ ಕಾಯ್ದೆಯಲ್ಲಿ ನಿಬಂಧರು\ಸರ್ಕಾರ ಕನ್ನಡ ಭಾಷೆಗಳಲ್ಲಿ ಲೆಕ್ಕ ಪತ್ರಗಳನ್ನು ನೀಡಲು ಸೂಚಿಸಿದೆ. ಕೆಲವು ಸಂದರ್ಭಗಳಲ್ಲಿ ಮೂಲ ಲೆಕ್ಕ ಪತ್ರಗಳ್ನು ಕನ್ನಡ ಬರೆದಿಟ್ಟು ಮತ್ತೊಂದು ಭಾಷೆಯಲ್ಲಿ ಬಹು ಸಂಖ್ಯೆ ಸದಸ್ಯರು ಅವರದೇ ಭಾಷೆಯಲ್ಲಿ ಲೆಕ್ಕಪತ್ರಗಳನ್ನು ನೀಡಲು ವಿನಂತಿಸಿದ್ದರೆ, ಮೂಲ ಲೆಕ್ಕಪತ್ರಗಳು ಕನ್ನಡದಲ್ಲಿ ಇದ್ದು ಬೇರೇ ಭಾಷೆಯಲ್ಲಿ ಬರೆದಿಡಲು ನಿರ್ಬಂಧವಿಲ್ಲ. ಆದರೆ ಅಧಿಕೃತವೆಂದು ದಾಖಲಾಗುವುದು ಕನ್ನಡದಲ್ಲಿ ಮಾತ್ರ.

**ಉದಾಹರಣೆಗೆ :** ಟಿಬೇಟಿಯನ್ ಸಹಕಾರಿ ಸಂಘಗಳಲ್ಲಿ ಟಿಬೆಟಿಯನ್ನು ಭಾಷೆಯಲ್ಲಿಯೂ ಲೆಕ್ಕಪತ್ರಗಳನ್ನು ಇಡುವ ರೂಡಿ ಇದೆ. ಅದರಂತೆ ಮಾರಾಠಿಯಲ್ಲಿಯೂ ಲೆಕ್ಕಪತ್ರಗಳನ್ನು ಇಟ್ಟರೂ ಅದು ಪ್ರತಿಯಾಗಿರುತ್ತದೆಯೋ ಹೊರತು ಕನ್ನಡದ ಮೂಲ ಪ್ರತಿಗೆ ಚ್ಯುತಿ ಬರದಂತೆ ನೊಡಿಕೊಳ್ಳತಕ್ಕದ್ದು.

# Banking Sector in India

**India is the leading country in the world in terms of digital transactions with a 19 .times jump in digital transactions in just 7 years**

**Courtesy : Banking industry report – India**

In India we are very familiar with Multi-purpose co-operatives, which are typically cooperatives that engage in more than one type of activity. If a cooperative has provision for engaging in multiple business activities such as credit, retailing, production, services etc., it can be called a multi-purpose cooperative. In fact, in Karnataka there are a large number of multi-purpose cooperatives, and they are formally registered so which gets reflected in their name too. However, Multi-stakeholder cooperative is totally a different model and many countries in the world have established new type of co-operative model. It is typical for a cooperative to draw its membership from a single category of members. This means an agricultural cooperative will have farmers as members, producers' cooperatives will have producers as members and consumer cooperatives will have

## ROBUST DEMAND

- Increase in working population and growing disposable income will raise the demand for banking and related services.
- By 2025, India's fintech market is expected to reach Rs. 6.2 trillion (US$ 83.48 billion).

## INNOVATION IN SERVICES

- Mobile, internet banking and extension of facilities at ATMs will improve operational efficiency.
- RBI announced the launch of its first global hackathon 'HARBINGER 2021 – Innovation for Transformation' with the theme 'Smarter Digital Payments'.

BUSINESS FUNDAMENTALS

- Rising fee incomes are improving the revenue mix of banks.
- High net interest margins along with low NPA levels will ensure healthy business fundamentals.

## POLICY SUPPORT

- Wide policy support in the form of private sector participation and liquidity infusion.
- RBI launched the 'RBI Retail Direct Scheme' for retail investors to increase retail participation in government securities.

## INTRODUCTION





As per the Reserve Bank of India (RBI), India's banking sector is sufficiently capitalised and well-regulated. The financial and economic conditions in the country are far superior to any other country in the world. Credit, market and liquidity risk studies suggest that Indian banks are generally resilient and have withstood the global downturn well.

Indian banking industry has recently witnessed the roll out of innovative banking models like payments and small finance banks. RBI's new measures may go a long way in helping the restructuring of the domestic banking industry.

The digital payments system in India has evolved the most among 25 countries with India's Immediate Pay-

ment Service (IMPS) being the only system at level five in the Faster Payments Innovation Index (FPII).*

## MARKET SIZE




The Indian banking system consists of 12 public sector banks, 22 private sector banks, 46 foreign banks, 56 regional rural banks, 1485 urban cooperative banks and 96,000 rural cooperative banks in addition to cooperative credit institutions As of September 2021, the total number of ATMs in India reached 213,145 out of which 47.5% are in rural and semi urban areas.

In FY18-FY21, bank assets across sectors increased. Total assets across the banking sector (including public and private sector banks) increased to US$ 2.48 trillion in FY21.

In FY21, total assets in the public and private banking sectors were US$ 1,602.65 billion and US$ 878.56 billion, respectively.

During FY16-FY21, bank credit increased at a CAGR of 0.29%. As of FY21, total credit extended surged to US$ 1,487.60 billion. During FY16-FY21, deposits grew at a CAGR of 12.38% and reached US$ 2.06 trillion by FY21. Bank deposits stood at Rs. 162.41 trillion (US$ 2.17 trillion) as of December 31, 2021.

According to India Ratings & Research (Ind-Ra), credit growth is expected to hit 10% in 2022-23 which will be a double-digit growth in eight years. According to the RBI, bank credit stood at Rs. 116.8 lakh crore (US$ 1.56 trillion) on 31st December 2021.

As of February 2022, credit to non-food industries stood at Rs. 114.10 trillion (US$ 1.53 trillion).

## INVESTMENTS

Key investments and developments in India's banking industry include:

- As of February 21, 2022, the number of bank accounts—opened under the government's flagship financial inclusion drive 'Pradhan Mantri Jan Dhan Yojana (PMJDY)'—reached 44.63 crore and deposits in the Jan Dhan bank accounts totalled Rs. 1.58 trillion (US$ 21.25 billion).
- On November 09, 2021, RBI announced the launch of its first global hackathon 'HARBINGER 2021 – Innovation for Transformation' with the theme 'Smarter Digital Payments'.
- In November 2021, Kotak Mahindra Bank announced that it has completed the acquisition of a 9.98% stake in KFin Technologies for Rs. 310 crore (US$ 41.62 million).
- In July 2021, Google Pay for Business has enabled small merchants to access credit through tie-up with the digital lending platform for MSMEs—FlexiLoans.
- In December 2020, in response to the RBI's cautionary message, the Digital Lenders' Association issued a revised code of conduct for digital lending
- On November 6, 2020, WhatsApp started UPI payments service in India on receiving the National Payments Corporation of India (NPCI) approval to 'Go Live' on UPI in a graded manner.
- In October 2020, HDFC Bank and Apollo Hospitals partnered to launch the 'HealthyLife Programme', a holistic healthcare solution that makes healthy living accessible and affordable on Apollo's digital platform.
- In 2019, banking and financial services witnessed 32 M&A (merger and acquisition) activities worth US$ 1.72 billion.
- In March 2020, State Bank of India (SBI), India's largest lender, raised US$ 100 million in green bonds through private placement.
- In February 2020, the Cabinet Committee on Eco-

nomic Affairs gave its approval for continuation of the process of recapitalization of Regional Rural Banks (RRBs) by providing minimum regulatory capital to RRBs for another year beyond 2019-20 - till 2020-21 to those RRBs which are unable to maintain minimum Capital to Risk weighted Assets Ratio (CRAR) of 9% as per the regulatory norms prescribed by RBI.

- National Asset reconstruction company (NARCL) will take over, 15 non-performing loans (NPLs) worth Rs. 50,000 crores (US$ 6.70 billion) from the banks.
- National payments corporation India (NPCI) has plans to launch UPI lite this will provide offline UPI services for digital payments. Payments of upto Rs. 200 (US$ 2.67) can be made using this.
- In the Union budget of 2022-23 India has announced plans for a central bank digital currency (CBDC) which will be possibly known as Digital Rupee.
- National Asset reconstruction company (NARCL) will take over, 15 Non performing loans (NPLs) worth Rs. 50,000 crores (US$ 6.70 billion) from the banks.
- In November 2021, RBI launched the 'RBI Retail Direct Scheme' for retail investors to increase retail participation in government securities.
- The RBI introduced new auto debit rules with a mandatory additional factor of authentication (AFA), effective from October 01, 2021, to improve the safety and security of card transactions, as part of its risk mitigation measures.
- In September 2021, Central Banks of India and Singapore announced to link their digital payment systems by July 2022 to initiate instant and low-cost fund transfers.
- In August 2021, Prime Minister Mr. Narendra Modi launched e-RUPI, a person and purpose-specific digital payment solution. e-RUPI is a QR code or SMS string-based e-voucher that is sent to the beneficiary's cell phone. Users of this one-time payment mechanism will be able to redeem the voucher at the service provider without the usage of a card, digital payments app, or internet banking access.
- As per Union Budget 2021-22, the government will disinvest IDBI Bank and privatise two public sector banks.
- Government smoothly carried out consolidation, reducing the number of Public Sector Banks by eight.

## ACHIEVEMENTS

Following are the achievements of the Government:

- In January 2022, Unified Payments Interface (UPI) recorded 4.62 billion transactions worth Rs. 8.32 trillion (US$ 111.8 billion).
- According to the RBI, India's foreign exchange reserves reached US$ 630.19 billion as of February 18, 2022
- To improve infrastructure in villages, 204,000 point of sale (PoS) terminals have been sanctioned from the Financial Inclusion Fund by National Bank for Agriculture & Rural Development (NABARD).
- The number of transactions through immediate payment service (IMPS) reached 430.67 million and amounted to Rs. 3.70 trillion (US$ 49.75 billion) in October 2021.

## ROAD AHEAD

Enhanced spending on infrastructure, speedy implementation of projects and continuation of reforms are expected to provide further impetus to growth in the banking sector. All these factors suggest that India's banking sector is poised for a robust growth as rapidly growing businesses will turn to banks for their credit needs.

Also, the advancement in technology has brought mobile and internet banking services to the fore. The banking sector is laying greater emphasis on providing improved services to their clients and upgrading their technology infrastructure to enhance customer's overall experience as well as give banks a competitive edge.

India's digital lending stood at US$ 75 billion in FY18 and is estimated to reach US$ 1 trillion by FY23 driven by the five-fold increase in the digital disbursements. By 2025, India's fintech market is expected to reach Rs. 6.2 trillion (US$ 83.48 billion).

# ಕಾರ್ಮಿಕರ ದಿನಾಚರಣೆಯನ್ನು ಶ್ರಮಿಕರ ದಿನಾಚರಣೆಯಾಗಿ ಅರ್ಥಪೂರ್ಣವಾಗಿ ಆಚರಿಸೋಣ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತ



18ನೇ ಶತಮಾನದಲ್ಲಿ ಪಾಶ್ಚಿಮತ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಯುಗ ಪ್ರಾರಂಭವಾಗಿ ಜಗತಿನಾದಂತ್ಯ ಹಲವು ಕೈಗಾರಿಕೆಗಳು ಉದಯವಾಗಿ ಲಕ್ಷಾಂತರ ಜನರು ಕೈಗಾರಿಕೆಯಲ್ಲಿ ಕೆಲಸ ನಿರ್ವಹಿಸುತಿದ್ದರು. ಉದ್ಯಮಿಗಳು ಉತ್ಪಾದನಗೆ ಹೆಚ್ಚು ಗಮನ ನೀಡಿ ಹಗಲು ರಾತ್ರಿ ಎನ್ನದೆ ಕಡಿಮೆ ಕೆಲಸಗಾರರಿಂದ ಹೆಚ್ಚು ಸಮಯ ದುಡಿಸಿಕೊಂಡು ಹೆಚ್ಚು ಉತ್ಪಾದನೆ ಮಾಡುವುದರ ಮುಖಾಂತರ ಹೆಚ್ಚಿಗೆ ಲಾಭಗಳಿಸುತ್ತಿದ್ದರೂ ಇದರಿಂದಾಗಿ ಕೆಲಸಗಾರರು ತಮ್ಮ ಕುಟುಂಬದ ಕಡೆ ಹಾಗೂ ಆರೋಗ್ಯದ ಕಡೆ ಗಮನ ಹರಿಸದ ಕಾರಣ ಅನಾರೋಗ್ಯ ಹಾಳಾಗಿ ಕುಟುಂಬದಲ್ಲಿ ನೆಮ್ಮದಿ ಜೀವನಕ್ಕೆ ಧಕ್ಕೆಯಾಗುತಿರುವುದನ್ನು ಗಮನಿಸಿದ ಕಾರ್ಮಿಕ ನಾಯಕರು ಕಾರ್ಮಿಕರಿಂದಲೆ ಕೈಗಾರಿಕಾ ಉದ್ಯಮಗಳು ಅವುಗಳಿಂದಲೇ ಉದ್ಯಮಿಗಳು, ಕಾರ್ಮಿಕರು ನೆಮ್ಮದಿಯಿಂದ ಇದ್ದರೆ ಎಲ್ಲವು ಸರಿಯಾಗುತ್ತದೆ ಎಂದು ಹಲವರ ಅಭಿಪ್ರಾಯ ಪಡೆದು ಪರೀಶಿಲಿಸಿ 18ನೇ ಶತಮಾನದ ಕೊನೆಯಲ್ಲಿ ಮೇ–1 1886 ರಂದು ಕೆಲಸಕ್ಕೆ ರಜೆ ಹಾಕಿ ದಿನದ ಎಂಟು ಗಂಟೆ ಕೆಲಸಕ್ಕಾಗಿ, ಎಂಟು ಗಂಟೆ ಮನರಂಜನೆಗೆ ಹಾಗೂ ಎಂಡು ಗಂಟೆ ವಿಶ್ರಾಂತಿ ಹಾಗೂ ವಾರದಲ್ಲಿ ರಜೆ ನೀಡಬೇಕೆಂದು ಪ್ರತಿಪಾದಿಸಿದ ದಿನವನ್ನು ಕಾರ್ಮಿಕ ದಿನಾಚರಣೆ ಎಂದು ಆಚರಿಸಲಾಗುತ್ತಿದೆ.

ವಿಶ್ವದ ಬಹುತೇಕ ದೇಶಗಳು ಮೇ–1 ನ್ನು ಕಾರ್ಮಿಕ ದಿನಾಚರಣೆ ಎಂದು ಆಚರಿಸಲಾಗುತ್ತಿದೆ, ಕೆಲ ದೇಶಗಳು ವಿಭಿನ್ನ ದಿನಾಂಕದಂದು ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಆಚರಿಸಲಾಗುತ್ತಿದೆ, ಭಾರತದಲ್ಲಿ ಮೊದಲು ಹಿಂದಿನ ಮದ್ರಾಸ ಈಗಿನ ಚೆನ್ನೈನಲ್ಲಿ ಲೇಬರ ಕಿಸಾನ ಪಾರ್ಟಿ ಆಫ್ ಹಿಂದುಸ್ತಾನ ಮೇ 1, 1923 ರಂದು ಕಾರ್ಮಿಕ ದಿನಾಚರಣೆ ಆಯೋಜಿಸಿತ್ತು. ಭಾರದಲ್ಲಿ ಸನ್ 2009–10 ರ ಸರ್ವೇಯಂತೆ ನಮ್ಮ ದೇಶದಲ್ಲಿ 46.50ಕೋಟಿ ಕಾಮಿಕರು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು ಹೊಂದಿದ್ದಾರೆ. 2.80 ಕೊಟಿ ಸಂಘಟಿತ ಕಾಮಿಕರು ಹೊಂದಿದ್ದರೆ, 43.70 ಕೊಟಿ ಅಸಂಘಟಿತ ವಲಯದ ಬೃಹತ ಕಾರ್ಮಿಕರು ಹೊಂದಿದ್ದಾರೆ, ಅಸಂಘಟಿತ ವಲಯದಲ್ಲಿ ಸುಮಾರು 24.60 ಕೋಟಿ ಕೃಷಿಕಾರ್ಮಿಕರು, 4.40 ಕೊಟಿ ಕಟ್ಟಡ ಕಾರ್ಮಿಕರು, ಉಳಿದವರು ಸೇವಾ, ವಲಯ, ನೇಕಾರಿಕೆ, ಮಿನುಗಾರಿಕೆದಂತಹ ಹಲವಾರು ಕ್ಷೇತ್ರದಲ್ಲಿ ಅಸಂಘಟಿತವಾಗಿರುವ ಕಸುಬಿನಲ್ಲಿ ಕಾರ್ಯನಿರ್ವಹಿಸುತಿದ್ದಾರೆ.

ಕಾರ್ಮಿಕ ಸಂಘಟನೆಗಳ ಧೀರ್ಘಕಾಲದ ಹೊರಾಟಗಳಿಂದ ಸಂಘಟಿತ ವಲಯದ ಕಾರ್ಮಿಕರಿಗೆ ಸರಕಾರ ಹಲವು ಯೋಜನೆಗಳು ಕಾನೂನು ರಚಿಸುವುದರ ಮುಖಾಂತರ ಸುಧಾರಣೆ ಗೊಂಡಿದೆ. ಆದರೆ ಅಸಂಘಟಿತ ವಲಯದ ಕಾರ್ಮಿಕರ ಹಲವು ಸಮಸ್ಯೆಗಳ ಮಧ್ಯ ಕಾರ್ಯನಿರ್ವಹಿಸುತ್ತ ತಮ್ಮ ಉಪಜೀವನವನ್ನು ನಡೆಸುತ್ತಿದ್ದಾರೆ. ಇಂಹತ ಅಸಂಘಟಿತ ಕಾರ್ಮಿಕರನ್ನು ಸಂಘಟಿತ ವಲಯದ ಮುಖ್ಯವಾಹಿನಿಗೆ ತರಬೇಕಾದ ಕೆಲಸ ಕಾರ್ಮಿಕ ಸಂಘಟನೆ ಹಾಗೂ ಸರಕಾರದ ಜವಾಬ್ದಾರಿಯಾಗಿದೆ. ನಿಜವಾಗಲೂ ಸಹ ಅಸಂಘಟಿತ ವಲಯದ ಕಾರ್ಮಿಕರ ಕಾಯಕ ಸಮಾಜದ ಅಂತರ್ಮುಖಿಯಾಗಿದ್ದು ದೈನಂದಿನ ಉಪಜೀವನಕ್ಕೆ ಅನಿವಾರ್ಯವಾದ ವಸ್ತುಗಳನ್ನು ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ ಅವರ ಕೆಲಸ ಕಾರ್ಯಗಳು ಸಮಾಜದ ಸುವ್ಯವಸ್ಥೆಗೆ ಪೂರಕವಾಗಿದೆ. ಹಾಗಾಗಿ ನಿಜವಾಗಲು ಕಾರ್ಮಿಕರಲ್ಲ ಶ್ರಮಿಕರು ಉದಾ: ನಮ್ಮ ಮನೆಯ ಅಡುಗೆ ಮಾಡುವ ಕೆಲಸದಾಕೆ ನಮ್ಮ ಮೂರು ಹೊತ್ತಿನ ಊಟವನ್ನು ರುಚಿಯಾಗಿ ಶ್ರದ್ಧೆಯಿಂದ ತಯಾರಿಸಿ ಅಡುಗೆ ಮಾಡಿ ಬಡಸುವವಳು. ಒಂದು ದಿನ ಅವಳು ಅಡುಗೆ ಮಾಡಲು ಬರದಾಗ ಮನೆಯ ಒಡತಿ ಅದೇ ಸಾಮಾನುಗಳು ಬಳಸಿ ಮಾಡುವವಳು ಅವಳನ್ನು ನಾವು ಕಾರ್ಮಿಕರೆಂದು ಕರೆಯುವುದು ಉಚಿತವೇ! ಇಲ್ಲಿ ಇಬ್ಬರ ಕಾಯಕ ಶ್ರಮ ಒಂದೆ ಆದರೆ ನಾವು ಅವರನ್ನು ನೋಡುವ ದೃಷ್ಠಿ ಬೇರೆ, ಬೇರೆ ಆದ್ದರಿಂದ ಮನೆಯ ಆಳು ಮಾಡುವ ಕಾಯಕ ಮತ್ತು ಮನೆಯ ಒಡತಿ ಮಾಡುವ ಕಾಯಕ ಒಂದೇ ಇಲ್ಲಿ ಇಬ್ಬರದು ಶ್ರಮವೇವಾಗಿದೆ ಆದ್ದರಿಂದ ವಿವಿಧ ಕ್ಷೇತ್ರಗಳಲ್ಲಿ ಕಾಯಕ ಮಾಡುತ್ತಿರುವ ಶ್ರಮಕ್ಕೆ ಗೌರವ ಸಲ್ಲಿಸಲು ಮೇ 1 ಅನ್ನು ಕಾರ್ಮಿಕ ದಿನಾಚರಣೆ ಬದಲಾಗಿ ಶ್ರಮಿಕರ ದಿನಾಚರಣೆಯೆಂದು ಅರ್ಥಪೂರ್ಣವಾಗಿ ಆಚರಣೆಯಾಗಿಲಿ.

ಸ್ವಾಭಿಮಾನಿ ಸಹಕಾರಿ


Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 30
Licensed to post without Prepayment License No. PMG BG/WPP-384/2020-2022.

# ಫೀಡ್ ಬ್ಯಾಕ್(Feedback) ಪ್ರಕ್ರಿಯೆ

– ಶ್ರೀ ಧೀರೇಂದ್ರ ನಾಗರಹಳ್ಳಿ

ಯಾವುದೇ ಸಭೆ, ಸಮಾರಂಭ, ಕಾರ್ಯಗಾರ, ತರಬೇತಿ ಕಾರ್ಯಕ್ರಮಗಳು ಜರುಗಿದಾಗ ಕಾರ್ಯಕ್ರಮದ ಸಫಲತೆಯ ಬಗ್ಗೆ ಕಾರ್ಯಕ್ರಮ ಸಂಘಟಿಸಿದವರಿಗೆ ಕಾಳಜಿ ಇರುತ್ತದೆ. ಈ ಕಾರ್ಯಕ್ರಮ ಸಫಲತೆಯ ವಿವರಗಳನ್ನು ಪಡೆಯಬೇಕಾದದ್ದು ಕಾರ್ಯಕ್ರಮ ಸಂಘಟಿಸುವವರ ಕರ್ತವ್ಯ ಹಾಗೂ ಜವಾಬ್ದಾರಿ. ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವ ವಿಧಾನವೇ ಅವರ ಪ್ರತಿಕ್ರಿಯೆ ಅಥವಾ ಫೀಡ್ ಬ್ಯಾಕ್ ಎಂದು ಕರೆಯಬಹುದು. ಲೇಖಕರು ಫೀಡ್ ಬ್ಯಾಕ್ ಬಗ್ಗೆ ಫೀಡ್ ಬ್ಯಾಕ್ ಸ್ವರೂಪಗಳ ಬಗ್ಗೆ ವಿವರಣೆ ನೀಡಿದ್ದಾರೆ.

ಫೀಡ್ ಬ್ಯಾಕ್ ಅನ್ನು ವ್ಯಾಖ್ಯಾನಿಸುವುದಾದರೆ ಯಾವುದಾದರು ವಸ್ತು ಅಥವಾ ವ್ಯಕ್ತಿಯ ಕಾರ್ಯ ನಿರ್ವಹಣೆಯ ಬಗೆಗಿನ ಪ್ರತಿಕ್ರಿಯೆಯನ್ನೆ ನಾವು ಫೀಡ್ ಬ್ಯಾಕ್. ಇದನ್ನು ಕನ್ನಡದಲ್ಲಿ ಹೇಳುವುದಾದರೆ ಪ್ರತಿಕ್ರಿಯೆ ಅಥವಾ ಪ್ರತ್ಯಾದಾನ ಅಂತ ಕರೆಯುವುದು. ಸಂವಹನ ಪ್ರಕ್ರಿಯೆಯಲ್ಲಿ ತುಂಬಾ ಮುಖ್ಯವಾದ ಒಂದು ಭಾಗವೇ 'ಫೀಡ್ ಬ್ಯಾಕ್'




**ನಾವು ಎರಡು ತರಹದ ಪ್ರತಿಕ್ರಿಯೆಗಳನ್ನು ನೋಡುತ್ತೇವೆ**

1) ಸಕಾರಾತ್ಮಕ ಪ್ರತಿಕ್ರಿಯೆ (Positive Feedback)

2) ನಕಾರಾತ್ಮಕೆ ಪ್ರತಿಕ್ರಿಯೆ (Negetive Feedback)

3) ರಚನಾತ್ಮಕವಾದ ಪ್ರತಿಕ್ರಿಯೆ (Constructive Feedback)

ಮನುಷ್ಯ ಸಹಜವಾಗಿ ಸ್ವಯಂ ಕೇಂದ್ರಿತನಾಗಿರುತ್ತಾನೆ (Self Centered) ಹೀಗಾಗಿ ಯಾವುದೇ ಫೀಡಬ್ಯಾಕಗಳು ವ್ಯಕ್ತಿತ್ವಕ್ಕೆ ಸಂಬಂಧ ಪಟ್ಟಿದ್ದಾಗಿರದೆ ನಡುವಳಿಕೆಯ,ಕಾರ್ಯ ಕ್ಷಮತೆ ಮತ್ತು ಕಾರ್ಯಗಳನ್ನು ನಿರ್ವಹಿಸಿದ ರೀತಿಯಲ್ಲಾದ ಬದಲಾವಣೆಗೆ ಸಂಬಂಧ ಪಟ್ಟಿದ್ದಾಗಿರಬೇಕೆ ಹೊರತು ವ್ಯಕ್ತಿತ್ವಕ್ಕೆ ಸಂಬಂಧ ಪಟ್ಟಿದ್ದಾಗಿರಬಾರದು.

| ನಕಾರಾತ್ಮಕ ಪ್ರತಿಕ್ರಿಯೆ | ಸಕಾರಾತ್ಮಕ ಪ್ರತಿಕ್ರಿಯೆ | ರಚನಾತ್ಮಕವಾದ ಪ್ರತಿಕ್ರಿಯೆ |
|---|---|---|
| ಬೆನ್ನನ್ನು ತಟ್ಟಿ ಪ್ರೋತ್ಸಾಹಿಸುವ ಭಾಷೆಗಳು ವೃದ್ಧಿಗೊಳಿಸಲು | ನಕರಾತ್ಮಕ ಭಾಷೆಗಳು | ರಚನಾತ್ಮಕವಾದ ಭಾಷೆ ಕಾರ್ಯ ಕ್ಷಮತೆಯನ್ನು ವೃದ್ಧಿಗೊಳಿಸಲು |
| ಉದ್ದೇಶ : ಮಾಡಿದ ಕೆಲಸವನ್ನು ಕಡಿಮೆ ಗೊಳಿಸುವುದು ಅಥವಾ ನಿರಾಕರಿಸಿ ನಿರುತ್ಸಾಹ ತುಂಬುವುದು | ಉದ್ದೇಶ :–ಸಕಾರಾತ್ಮಕ ನಡುವಳಿಕೆಯನ್ನು ಬಿತ್ತುವುದು | ಉದೇಶ :– ನಡವಳಿಕೆಯಲ್ಲಿ ಬದಲಾವಣೆಯಿಂದ ಹೆಚ್ಚಿನ ಕಾರ್ಯಕ್ಷಮತೆ ವೃದ್ಧಿಸುವಂತೆ ಮಾಡುವುದು |

**ಫೀಡ್ ಬ್ಯಾಕ್ ನ ಹಂತಗಳನ್ನು ಐದು ಎಂದು ಹೇಳಬಹುದು :–**

ಫೀಡ್ ಬ್ಯಾಕ್ ಕೊಡುವುದಕ್ಕೂ ಮೊದಲು ಕೆಳಗೆ ಕೊಟ್ಟಿರುವ ಕೆಲವು ಅಂಶಗಳನ್ನು ಗಮನಿಸಬೇಕು HIPCOS

1) 'ಹಿತಕರವಾದ ವಾತಾವರಣ'ವನ್ನು ಸೃಷ್ಟಿಸಬೇಕು (Create Comfort)

2) ಧನಾತ್ಮಕವಾಗಿ ಆಲೋಚಿಸುವಂತೆ ಪ್ರೇರೆಪಿಸಬೇಕು(Think Positively)

3) ಹೇಳುವುದನ್ನು ನಿಖರವಾಗಿ ಹೇಳುವುದು (Be Specific)

4) ಆ ಕ್ಷಣದಲ್ಲಿ ಹೇಳಿ ಮುಗಿಸುವುದು (Be Immediate)

5) ತುಂಬಾ ಪ್ರಾಮಾಣಿಕವಾಗಿ ಫೀಡ್ ಬ್ಯಾಕ ಅನ್ನು ಕೊಡಿ (Be Honest

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010